# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA


HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪುಟ:01 Volume:01 • ಸಂಚಿಕೆ:186 Issue:186 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 17.12.2023 • ಭಾನುವಾರ Sunday • ಪುಟ:04 Page:04 • ಬೆಲೆ:2 Rs:2







ಮೈಕ್ರೋ ನ್ಯೂಸ್

## ಬಿಜೆಪಿಯ ಸತ್ಯಶೋಧನಾ ತಂಡದ ಭೇಟಿ ರಾಜಕೀಯ ಪ್ರೇರಿತ : ಸಿಎಂ ಸಿದ್ದರಾಮಯ್ಯ



**ಹುಬ್ಬಳ್ಳಿ:** ಹೆಣ್ಣುಮಕ್ಕಳ ಮೇಲಾಗುವ ದೌರ್ಜನ್ಯವನ್ನು ನಾನು ತೀವ್ರವಾಗಿ ಖಂಡಿಸಿದ್ದೇನೆ. ನಾಗರಿಕ ಸಮಾಜ ತಲೆತಗ್ಗಿಸುವಂತಹ ಹೇಯ ಕೃತ್ಯಗಳು ಎಲ್ಲಿಯೂ ನಡೆಯ ಬಾರದು. ಬೆಳಗಾವಿ ವಂಟ ಮೂರಿ ಗ್ರಾಮದಲ್ಲಿ ಮಹಿಳೆಯ ಮೇಲಾದ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿ ದಂತೆ ಬಿಜೆಪಿಯ ಸತ್ಯಶೋಧನಾ ತಂಡದ ಭೇಟಿ ರಾಜಕೀಯ ಪ್ರೇರಿತ. ಈ ಪ್ರಕರಣದಲ್ಲಿ ಸರ್ಕಾರ ಕಾನೂನು ರೀತ್ಯ ಎಲ್ಲ ಕ್ರಮಗಳನ್ನು ತೆಗೆದುಕೊಂಡಿದೆ. ಗೃಹಸಚಿವರು ಆಸ್ಪತ್ರೆಗೆ ತೆರಳಿ ಸಂತ್ರಸ್ಥೆಯನ್ನು ಭೇಟಿ ಮಾಡಿ ಸಾಂತ್ವನ ಹೇಳಿದ್ದಾರೆ. ದೌರ್ಜನ್ಯಕ್ಕೊಳಗಾದ ಮಹಿಳೆಗೆ ಪರಿಹಾರ ನೀಡಲು ಕ್ರಮಕೈಗೊಳ್ಳಲಾಗಿದ್ದು, ಆರೋಪಿಗಳನ್ನು ತಕ್ಷಣ ಬಂಧಿಸಲಾಗಿದೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಈ ಪ್ರಕರಣದಲ್ಲಿ ರಾಜಕೀಯ ಮಾಡುತ್ತಿದ್ದಾರೆ. ನ್ಯಾಷನಲ್ ಕ್ರೈಂ ಬ್ಯೂರೋ ಪ್ರಕಾರ ಬಿಜೆಪಿ ಅವಧಿಯಲ್ಲಿ ಮಹಿಳಾ ದೌರ್ಜನ್ಯ ಪ್ರಕರಣಗಳು ಹೆಚ್ಚು ನಡೆದಿವೆ. ಉತ್ತರಪ್ರದೇಶದ ಬಿಜೆಪಿಯ ಶಾಸಕರೊಬ್ಬರು ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಅಪರಾಧಕ್ಕಾಗಿ 25 ವರ್ಷ ಜೈಲುಶಿಕ್ಷೆಗೆ ಗುರಿಯಾಗಿದ್ದಾರೆ. ಇದರ ಬಗ್ಗೆ ನಡ್ಡಾ ಪ್ರತಿಕ್ರಿಯೆ ನೀಡಿದ್ದಾರ?

ನವದೆಹಲಿಯ ಸಂಸತ್ ಭವನದಲ್ಲಿ ಭದ್ರತಾ ಲೋಪವಾಗಿರುವ ಬಗ್ಗೆ ಸಂಸತ್ತಿನ ವಿಪಕ್ಷಗಳು ರಾಜಕೀಯ ಎಲ್ಲಿ ಮಾಡುತ್ತಿವೆ? ಸಂಸತ್ತಿನಲ್ಲಿ ಭದ್ರತಾ ಲೋಪವಾಗಿರುವುದು ಸತ್ಯ. ಈ ಸತ್ಯವನ್ನು ಹೇಳಿದರೆ ರಾಜಕೀಯ ಹೇಗಾಗುತ್ತೆ?

ಜಾತಿ ಗಣತಿ ವರದಿ ಇನ್ನೂ ಸರ್ಕಾರದ ಕೈಸೇರಿಲ್ಲ. ಹೀಗಾಗಿ ಯಾರಿಗೂ ಆ ವರದಿಯಲ್ಲಿರುವ ಅಂಶಗಳೇನು ಎಂಬ ಮಾಹಿತಿ ಇಲ್ಲ, ಕೇವಲ ಊಹೆಗಳ ಮೇಲೆ ಮಾತನಾಡುತ್ತಿದ್ದಾರೆ. ವರದಿ ಬಂದ ಮೇಲೆ ಸಾಧಕ - ಬಾಧಕಗಳೇನು ಎಂದು ತಿಳಿಯುತ್ತದೆ.

# ಟ್ಯಾಲೆಂಟ್ ಜೊತೆ ಹಾರ್ಡ್‌ವರ್ಕ್ ಇರಲಿ

**ಆವಂತಿ ಮುಖ್ಯಸ್ಥ ಪ್ರದೀಪ್ ಶೆಟ್ಟಿ ಹೇಳಿಕೆ | ಭವಿಷ್ಯದಲ್ಲಿ ಏನಾಗಬೇಕು ಎಂಬ ಗುರಿ ಮೊದಲೇ ನಿರ್ಧರಿಸಿ | ಕೂತು ಓದುವ ಅಭ್ಯಾಸ ಬೆಳೆಸಿಕೊಳ್ಳಿ**

■ **ಹಂಪಿ ಟೈಮ್ಸ್ ಹೊಸಪೇಟೆ**

ಪ್ರತಿಯೊಬ್ಬರಿಗೂ ದೊರಕುವ ಸಮಯ ಮತ್ತು ಲಭ್ಯವಿರುವ ಅವಕಾಶಗಳನ್ನು ಸದ್ವಿನಿಯೋಗಿಸಿಕೊಂಡರೆ ನಿರೀಕ್ಷಿತ ಗುರಿಸಾಧಿಸಲು ಸಾಧ್ಯ ಎಂದು ಆವಂತಿ ಸ್ಪರ್ಧಾತ್ಮಕ ತರಬೇತಿ ಸಂಸ್ಥೆಯ ಶೈಕ್ಷಣಿಕ ವಿಭಾಗದ ಮುಖ್ಯಸ್ಥ ಪ್ರದೀಪ್ ಶೆಟ್ಟಿ ಹೇಳಿದರು.

ನಗರದ ಶ್ರೀ ವೆಂಕಟೇಶ್ವರ ಕಲ್ಯಾಣಮಂಟಪದಲ್ಲಿ ಶನಿವಾರ ನಗರದ ಟಿಎಂಎಇಎಸ್ ಅಕಾಡೆಮಿ ಆಫ್ ಸೈನ್ಸ್ ಅಂಡ್ ಕಾಮರ್ಸ್ ಕಾಲೇಜಿನವತಿಯಿಂದ ಹಮ್ಮಿಕೊಂಡಿದ್ದ ಆವಂತಿ ಲಾಂಚ್ ಡೇ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಕ್ಕಳಲ್ಲಿ ಟ್ಯಾಲೆಂಟ್ ಇದ್ದರೆ ಸಾಲದು, ಹಾರ್ಡ್‌ವರ್ಕ್ ಮೈಗೂಡಿಸಿಕೊಳ್ಳಬೇಕು. ಎಸ್ಸೆಸ್ಸೆಲ್ಸಿ ಪರೀಕ್ಷೆಯ ಫಲಿತಾಂಶ ಪಿಯು ವಿಷಯಗಳ ಆಯ್ಕೆಗೆ ಅವಕಾಶ ಕಲ್ಪಿಸಿಕೊಡುತ್ತದೆ. ಪಿಯು ಉತ್ತೀರ್ಣತೆ ಭವಿಷ್ಯ ಬದುಕಿಗೆ ದಿಕ್ಸೂಚಿಯಾಗಲಿದೆ. ಪ್ರತಿಯೊಬ್ಬ ವಿದ್ಯಾರ್ಥಿ ತಾನು ಏನಾಗಬೇಕೆಂಬುದನ್ನು ಈಗಲೇ ನಿರ್ಧರಿಸಬೇಕು. ಗುರಿ ನಿರ್ಧಾರವಾದರೆ ಆ ದಾರಿಯಲ್ಲಿ ಸಾಗುವಾಗ ಎದುರಾಗುವ ಅಡೆತಡೆಗಳ ಬಗ್ಗೆ ಬಲ್ಲವರಿಂದ ತಿಳಿದುಕೊಂಡು ಸರಾಗವಾಗಿ ಗುರಿ ತಲುಪಬಹುದು. ಗುರಿಯೇ ಇಲ್ಲದ ಓದು ವ್ಯರ್ಥವಾಗಬಹುದು. ಅನೇಕ ಗಂಟೆಗಳ ವರೆಗೆ ಕೂತು ಓದುವ ಅಭ್ಯಾಸ ರೂಢಿಸಿಕೊಳ್ಳಬೇಕು. ಮನಸ್ಸಿನ ಚಂಚಲತೆಗೆ ಕಡಿವಾಣ ಹಾಕಿಕೊಳ್ಳಬೇಕು. ನಾನು ಪಡೆಯಬೇಕಿರುವ ಹುದ್ದೆಗನುಸಾರವಾಗಿ ಶಿಕ್ಷಣ ಕಲಿಕೆಯಲ್ಲಿ ತೊಡಗಿಕೊಳ್ಳಬೇಕು. ಮಕ್ಕಳ ಉನ್ನತ ಕನಸುಗಳ ಈಡೇರಿಕೆಗೆ ಪರಿಪೂರ್ಣ ತರಬೇತಿಯನ್ನು ಆವಂತಿ ನೀಡಲಿದೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಪ್ರೋ-ಎಡ್ಜ್ ಸಂಸ್ಥೆಯ ಸಂಪನ್ಮೂಲ ವ್ಯಕ್ತಿ ಫಯಾಜ್ ಅಹ್ಮದ್ ಮಾತನಾಡಿ, ಉನ್ನತ ಹುದ್ದೆ ಪಡೆಯುವ ಕನಸು ಕಾಣಬೇಕು. ಕನಸಿನ ಜೊತೆಗೆ ಶ್ರಮವೂ ಬೇಕು. ಗುರಿ ತಲುಪಲು ಬೇಕಿರುವ ಅಗತ್ಯತೆಗಳನ್ನು ಈಡೇರಿಸಿಕೊಳ್ಳಲು ಕೆಲ ಸಂದರ್ಭಗಳಲ್ಲಿ ಸಹಕಾರ ಹಾಗೂ ಹಣದ ಕೊರತೆಯಾದರೂ ಛಲ ಬಿಡಬಾರದು. ಜೀವನದಲ್ಲಿ ಸಾಧನೆಯ ಶಿಖರ ಏರುವವರೆಗೂ ಅನೇಕ ಸಮಸ್ಯೆಗಳು ಎದುರಾಗುತ್ತವೆ ಎಂಬುದನ್ನು ಮೊದಲೇ ಮನದಟ್ಟುಮಾಡಿಕೊಳ್ಳಬೇಕು ಎಲ್ಲಾ ಸಮಸ್ಯೆಗಳಿಗೆ ಪರಿಹಾರವಿರುತ್ತವೆ. ತಂದೆ-ತಾಯಿ, ಗುರುಗಳ ಬಳಿ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು. ಮಕ್ಕಳ ಶಿಕ್ಷಣದ ಹಿಂದೆ ತಂದೆ ತಾಯಿಗಳ ಪರಿಶ್ರಮ, ಬೆವರಿನ ಹಣ ಇರುತ್ತದೆ ಎಂಬುದನ್ನು ಯಾವ ಮಕ್ಕಳು ಅರಿಯುತ್ತಾರೋ ಆ ಮಕ್ಕಳು ಜೀವನದಲ್ಲಿ ಉತ್ತುಂಗಕ್ಕೇರುತ್ತಾರೆ ಎಂದರು.

ಶಾಲಾ ಶಿಕ್ಷಣ ಇಲಾಖೆ ಪದವಿಪೂರ್ವ ವಿಭಾಗದ ವಿಜಯನಗರ ಜಿಲ್ಲಾ ನೋಡಲ್ ಅಧಿಕಾರಿ, ಜಿಲ್ಲಾ ಪದವಿಪೂರ್ವ ಕಾಲೇಜುಗಳ ಪ್ರಾಚಾರ್ಯರ ಸಂಘದ ಅಧ್ಯಕ್ಷರಾದ ನಾಗರಾಜ್ ಹವಾಲ್ದಾರ್, ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಎಂ.ಕೆ. ರವೀಂದ್ರ, ಕಾಲೇಜಿನ ಪ್ರಾಚಾರ್ಯರು ಹಾಗೂ ಬೋಧಕ ಸಿಬ್ಬಂದಿ, ಡಿಎವಿ ಪಬ್ಲಿಕ್ ಸ್ಕೂಲ್ ಹಾಗೂ ರೋಜಬಡ್ ಶಾಲೆಗಳ ಮುಖ್ಯೋಪಾಧ್ಯಾಯರು ಇದ್ದರು. ಪ್ರೌಢ ಶಾಲಾ ವಿದ್ಯಾರ್ಥಿಗಳು ಹಾಗೂ ಪಾಲಕ ಪೋಷಕರು ಭಾಗವಹಿಸಿದ್ದರು. ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಸಂಸ್ಥೆಯ ಪ್ರತಿಭಾ ಹಿರೇಮಠ ನಿರ್ವಹಿಸಿದರು.






# ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸಿ

**ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿಕೆ | ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ**



■ ಹಂಪಿ ಟೈಮ್ಸ್ ಹೊಸಪೇಟೆ

ಮಕ್ಕಳಲ್ಲಿ ಅಡಗಿರುವ ಸೂಪ್ತ ಪ್ರತಿಭೆಗಳ ಅನಾವರಣಕ್ಕೆ ಪ್ರತಿಭಾ ಕಾರಂಜಿ ಕಾರ್ಯಕ್ರಮಗಳು ಉತ್ತಮ ವೇದಿಕೆಯಾಗಿವೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು.

ಜಿಲ್ಲಾಡಳಿತ ಶಾಲಾ, ಜಿಲ್ಲಾ ಪಂಚಾಯತ್, ವಿಜಯನಗರ ಹಾಗೂ ಶಾಲಾ ಶಿಕ್ಷಣ ಇಲಾಖೆ, ವತಿಯಿಂದ ಶನಿವಾರ ನಗರದ ಆಕಾಶ್ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ವಿಜಯನಗರ ಜಿಲ್ಲೆಯ ಪ್ರಾಥಮಿಕ ಹಾಗೂ ಪ್ರೌಢಶಾಲಾ ಮಕ್ಕಳ ಜಿಲ್ಲಾ ಮಟ್ಟದ ಪ್ರತಿಭಾಕಾರಂಜಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಮಕ್ಕಳಲ್ಲಿನ ಪ್ರತಿಭೆಯನ್ನು ಪಾಲಕ, ಪೋಷಕರು ಮತ್ತು ಶಿಕ್ಷಕರು ಗುರುತಿಸಿ ಪ್ರೋತ್ಸಾಹಿಸಬೇಕು. ಪ್ರತಿ ಮಗು ಗರಿಷ್ಠ ಅಂಕಗಳನ್ನು ಗಳಿಸಿಬೇಕೆಂಬ ಒತ್ತಾಯ ಸರಿಯಲ್ಲ. ಕೆಲ ಮಕ್ಕಳಲ್ಲಿ ಕ್ರೀಡೆ, ಸಾಹಿತ್ಯ. ರಂಗಭೂಮಿ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿಶೇಷ ಆಸಕ್ತಿ ಹೊಂದಿರುತ್ತಾರೆ. ಅರಿವು ಹೆಚ್ಚಳಕ್ಕಾಗಿ ಶಿಕ್ಷಣ ಅಗತ್ಯ ಶಿಕ್ಷಣದ ಜತೆ ಪಠ್ಯೇತರ ಚಟುವಟಿಕೆಗಳು ಅನೇಕ ಸಂದರ್ಭಗಳಲ್ಲಿ ಜೀವನಕ್ಕೆ ಆಧಾರಸ್ತಂಭವಾಗುತ್ತವೆ. ಎಸ್ಸೆಸ್ಸೆಲ್ಸಿ ಫಲಿತಾಂಶ ವಿಜಯನಗರ ಜಿಲ್ಲೆಗೆ ಕಳೆದ ಬಾರಿ 10ನೇ ಸ್ಥಾನ ದೊರೆತಿದೆ. ಈ ಬಾರಿ ಮೊದಲ ಸ್ಥಾನಕ್ಕೇರಲು ಎಲ್ಲರೂ ಶ್ರಮಿಸಬೇಕು ಎಂದು ಕರೆ ನೀಡಿದರು.

ಉಪನಿರ್ದೇಶಕ ಯುವರಾಜ್‌ನಾಯ್ಕ ಅಧ್ಯಕ್ಷತೆವಹಿಸಿ ಮಾತನಾಡಿ, ಮಕ್ಕಳು ಪಠ್ಯೇತರ ಚಟುವಟಿಕೆಗಳಲ್ಲಿ ಆಸಕ್ತಿವಹಿಸುತ್ತಿರುವುದು ಹೆಮ್ಮೆಯ ಸಂಗತಿ. ಜಿಲ್ಲಾ ಮಟ್ಟದ ವಿಜೇತ ವಿದ್ಯಾರ್ಥಿಗಳು ರಾಜ್ಯಮಟ್ಟದಲ್ಲಿ ಉತ್ತಮ ಪ್ರತಿಭೆ ಪ್ರದರ್ಶಿಸಿ ಜಿಲ್ಲೆಗೆ ಕೀರ್ತಿ ತರಬೇಕು ಎಂದರು.

ಶಾಲೆಯ ಆಡಳಿತ ಮಂಡಳಿಯ ಅಧ್ಯಕ್ಷ ಇಮಾಮ್ ನಿಯಾಜಿ, ಎ.ಪಿ.ಸಿ. ಶ್ರೀನಿವಾಸ್, ಸಹಾಯಕ ನಿರ್ದೇಶಕರಾದ ಎ.ಎನ್.ಸುಧಾಕರ್, ಪ್ರೌಢಶಾಲಾ ಮುಖ್ಯೋಪಾದ್ಯಾಯರ ಸಂಘದ ಜಿಲ್ಲಾಧ್ಯಕ್ಷರಾದ ಡಾ.ಅಕ್ಕಮಹಾದೇವಿ, ಪ್ರೌಢಶಾಲಾ ಸಹಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷರಾದ ಮನೋಹರ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಕಾರ್ಯದರ್ಶಿ ಬಿ.ಬಿ.ಶಿವಾನಂದ, ಹೊಸಪೇಟೆ ತಾಲೂಕು ಶಿಕ್ಷಕರ ಸಂಘದ ಅಧ್ಯಕ್ಷರಾದ ಬಸವರಾಜ.ಕೆ, ಜಿಲ್ಲಾ ಉಪಾಧ್ಯಕ್ಷರಾದ ಎ.ಕುಬೇರ ಆಚಾರಿ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷರಾದ ಕೆ.ಬಿ.ತಿಮ್ಮಪ್ಪ, ಕೂಡ್ಲಿಗಿ ತಾಲೂಕು ನೌಕರರ ಸಂಘದ ಅಧ್ಯಕ್ಷರಾದ ಪಿ.ಶಿವರಾಜ್, ಹಗರಿಬೊಮ್ಮನಹಳ್ಳಿ ಕಾರ್ಯದರ್ಶಿ ಕೊಟ್ರಪ್ಪ, ಮುಖ್ಯೋಪಾಧ್ಯಾಯರಾದ ಸಂಪದ ಮೇಡಂ, ಸಾವಿತ್ರಿ ಬಾಯಿಪುಲೆ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷರಾದ ಉಮಾದೇವಿ ಮೇಡಂ, ಸೇರಿದಂತೆ ಜಿಲ್ಲೆಯ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

ಶಿಕ್ಷಣ ಸಂಯೋಜಕರಾದ ಮಲ್ಲೇಶಪ್ಪ, ಎನ್.ನಾಗರಾಜ್ ನಿರ್ವಹಿಸಿದರು.

# ಸರ್ಕಾರದ ಯೋಜನೆಗಳನ್ನ ಕಟ್ಟಕಡೆಯ ವ್ಯಕ್ತಿಗೂ ತಲುಪಿಸಿ

**ಜಿಲ್ಲಾ ಪಂ. ಸಿಇಒ ಸದಾಶಿವ ಪ್ರಭು ಸೂಚನೆ ತರಬೇತಿ ಕಾರ್ಯಾಗಾರದ ಸಮಾರೋಪ**



■ **ಹಂಪಿ ಟೈಮ್ಸ್ ಹೊಸಪೇಟೆ**

ಸರ್ಕಾರದಿಂದ ಜಾರಿಯಾಗುವ ಯೋಜನೆಗಳನ್ನು ಜನ ಸಮುದಾಯದ ಕಟ್ಟಕಡೆಯ ವ್ಯಕ್ತಿಗೆ ತಲುಪಿಸುವಲ್ಲಿ ಜಾನಪದ ಕಲಾತಂಡಗಳ ಪಾತ್ರ ಪ್ರಮುಖವಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸದಾಶಿವ ಪ್ರಭು ಬಿ. ಅವರು ಹೇಳಿದರು.

ಕನ್ನಡ ವಿಶ್ವವಿದ್ಯಾಲಯ ಹಂಪಿ ವಿದ್ಯಾರಣ್ಯದ "ಭುವನ ವಿಜಯದಲ್ಲಿ" ಗುರುವಾರ ನಡೆದ ಕಲಬುರಗಿ ವಿಭಾಗ ಮಟ್ಟದ ಜಾನಪದ ಕಲಾತಂಡಗಳ ಮೂರು ದಿನಗಳ ತರಬೇತಿ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

21ನೇ ಶತಮಾನದಲ್ಲಿದ್ದರೂ ಕೂಡ ಇದುವರೆಗೆ ಬಾಲ್ಯವಿವಾಹದಂತಹ ಅನಿಷ್ಟ ಪಿಡುಗನ್ನು ಸಂಪೂರ್ಣವಾಗಿ ತೊಡೆದು ಹಾಕಲು ಸಾಧ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ಜನ ಸಮುದಾಯಕ್ಕೆ ಹೆಚ್ಚಿನ ಅರಿವು ಮೂಡಿಸಿ. ಈ ಪದ್ಧತಿಯ ನಿರ್ಮೂಲನೆಗೆ ಎಲ್ಲರೂ ಕೈಜೋಡಿಸಬೇಕು. ಕಲಾವಿದರು ಆರೋಗ್ಯ ಇಲಾಖೆಯ ರಾಯಭಾರಿಗಳಾಗಿ ಸರ್ಕಾರದ ಯೋಜನೆಯ ಮಾಹಿತಿಗಳನ್ನು ಜನರಿಗೆ ತಿಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಕರೆ ನೀಡಿದರು

ಕಾರ್ಯಕ್ರಮದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯ ಅಭಿವೃದ್ಧಿ ಅಧ್ಯಯನ ವಿಭಾಗದ ಪ್ರೊ. ಪ್ರಶಾಂತ್, ಜಿಲ್ಲಾ , ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಎಲ್.ಆರ್.ಶಂಕರ್ ನಾಯ್ಕ್, ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ. ಬಿ.ಜಂಬಯ್ಯ, ಸರಕಾರಿ ನೌಕರರ ಸಂಘದ ಎಸ್ಸಿ-ಎಸ್ಟಿ ಸಮನ್ವಯ ಸಮಿತಿ ಅಧ್ಯಕ್ಷ ಶಿವುಕುಮಾರ್ ಸೇರಿದಂತೆ ಕಾರ್ಯಕ್ರಮ ಅನುಷ್ಠನಾಧಿಕಾರಿಗಳು, ತಾಲೂಕು ಆರೋಗ್ಯಾಧಿಕಾರಿಗಳು ಇಲಾಖೆಯ ಸಿಬ್ಬಂದಿ ಮತ್ತು 07 ಜಿಲ್ಲೆಗಳ ಕಲಾವಿದರು ಹಾಗೂ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳು ಭಾಗವಹಿಸಿದ್ದರು.

ಕಲಾವಿದರಿಗೆ ಸಮಾರಂಭದಲ್ಲಿ ಪ್ರಮಾಣಪತ್ರ ವಿತರಿಸಲಾಯಿತು. ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡಮನಿ ಅವರು ಕಾರ್ಯಕ್ರಮ ನಿರೂಪಿಸಿದರು.

# ಅಧ್ಯಕ್ಷರಾಗಿ ಪುಷ್ಪಲತಾ ಅವಿರೋಧ ಆಯ್ಕೆ

■ **ಹಂಪಿ ಟೈಮ್ಸ್ ಕೊಟ್ಟೂರು**

ತಾಲೂಕಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ನೂತನ ಅಧ್ಯಕ್ಷರಾಗಿ ಪುಷ್ಪಲತಾ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಕೆ ಮರುತೇಶ, ಖಜಾಂಚಿಯಾಗಿ ಸಿ.ಎಚ್.ಎಂ ಗಂಗಾಧರ ಸ್ವಾಮಿ ಇವರನ್ನು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಪದಾಧಿಕರಿಗಳನ್ನು ಸಹ ಇದೇ ಸಂದರ್ಭದಲ್ಲಿ ನೇಮಕ ಮಾಡಲಾಯಿತು.






ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

## ಸರ್ಕಾರಿ ಶಾಲೆಯ ಮಕ್ಕಳೇ ಸಾರ್ವಜನಿಕ ಸೇವೆಗೆ ಸೈ

ಬಹುತೇಕ ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಬೇಕೆಂದರೆ ಹಿಂಜರಿತ, ಅನಾಸಕ್ತಿ, ಉಡಾಫೆ, ತಾತ್ಸಾರ ಮಾಡುತ್ತಾರೆ. ಸರ್ಕಾರಿ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ ಇಲ್ಲದಿರುವುದು, ಸ್ವಚ್ಛತೆ ಕೊರತೆ, ಶಿಕ್ಷಕರ ಕೊರತೆ, ಆಟದ ಮೈದಾನದ ಕೊರತೆ, ಕಲಿಕೆಯಲ್ಲಿ ಹಿಂದುಳಿಯುವಿಕೆ... ಹೀಗೆ ಹಲವಾರು ಕಾರಣಗಳನ್ನು ಪೋಷಕರು ನೀಡುತ್ತಾರೆ. ಇದು ಹೌದು ಕೂಡಾ. ಬಹುತೇಕ ಕಡೆ ಇದೇ ಪರಿಸ್ಥಿತಿ ಇದೆ ಎಂಬುದನ್ನು ಒಪ್ಪುವ ಮಾತು. ಇಂಗ್ಲಿಷ್ ಶಾಲೆಗಳಿಗೆ ಹೋದರೆ ಮಕ್ಕಳು ಶಿಸ್ತು ಕಲಿಯುತ್ತಾರೆ, ಕಲಿಕೆ ಮಟ್ಟ ಹೆಚ್ಚುತ್ತದೆ, ಜಾಣರಾಗುತ್ತಾರೆ ಎಂಬ ಪೋಷಕರ ಮಾತುಗಳನ್ನೂ ತಳ್ಳಿಹಾಕುವಂತಿಲ್ಲ. ಸರ್ಕಾರಿ ಶಾಲೆಗಳು ಇನ್ನೂ ಸಾಕಷ್ಟು ಸುಧಾರಣೆ ಆಗಬೇಕಿವೆ. ಈಗಿರುವ ಸೌಲಭ್ಯಗಳು ಏನೇನೂ ಅಲ್ಲ ಮತ್ತು ಸಾಲದು ಕೂಡಾ. ಇಂಗ್ಲಿಷ್ ಮೀಡಿಯಂ ಶಾಲೆಗಳಲ್ಲಿ ಬಹುತೇಕ ಎಲ್ಲ ಸೌಲಭ್ಯಗಳು ಇರುತ್ತವೆ. ಈ ಸರ್ಕಾರಿ ಶಾಲೆಗಳು ಮತ್ತು ಖಾಸಗಿ ಇಂಗ್ಲಿಷ್ ಶಾಲೆಗಳ ನಡುವೆ ಸಾಕಷ್ಟು ಸಾಮ್ಯತೆಗಳನ್ನು ನಾವು ಕಾಣಬಹುದು. ಆದರೆ, ಪೋಷಕರೇ.. ಒಂದು ಮಾತು ನೆನಪಿಡಿ. ನಿಮ್ಮ ಮಗು ತನ್ನಲ್ಲಿ ಜೀವನ ಪಾಠ ಅಳವಡಿಸಿಕೊಳ್ಳಬೇಕೆಂದರೆ ಅದು ಸರ್ಕಾರಿ ಶಾಲೆಗಳಿಂದ ಮಾತ್ರ ಸಾಧ್ಯ. ಇದು ಒಪ್ಪಲೇಬೇಕಾದ ಸತ್ಯ. ಮಗುವಿನ ಮನಸು ಬಹಳ ಮೃದು ಇರುತ್ತದೆ. ಅದಕ್ಕೆ ಒತ್ತಡ ಹೆಚ್ಚಿದರೆ ಭವಿಷ್ಯದಲ್ಲಿ ಅದು ಪರಿಣಾಮ ಬೀರುತ್ತದೆ. ಮಗುವಿನ ಓದಿನ ಪಾಠದ ಜತೆ ಭವಿಷ್ಯದ ಪಾಠವೂ ಬೇಕಾಗುತ್ತದೆ. ಕೇವಲ ಓದಿನ ಪಾಠದಿಂದ ಅಂಕ ಗಳಿಸಬಹುದು, ಕ್ಲಾಸಿಗೆ ಫಸ್ಟ್ ಬರಹುದು ಅಷ್ಟೇ. ಇದನ್ನೇ ಪೋಷಕರು ತಮ್ಮ ಮಕ್ಕಳು ಜಾಣರಾಗಿದ್ದಾರೆ ಎಂದು ಭಾವಿಸುತ್ತಾರೆ. ನಿಜವಾಗಿಯೂ ಜಾಣ ಅಂದರೆ ಬರೀ ಅಂಕಗಳಿಸುವುದಷ್ಟೇ ಅಲ್ಲ ಅಥವಾ ಕ್ಲಾಸಿಗೆ ಮೊದಲಿಗ ಆಗುವುದಷ್ಟೇ ಅಲ್ಲ. ಇದೆಲ್ಲದಕ್ಕಿಂತ ಜೀವನ ಪಾಠವೇ ಮೊದಲಿಗೆ ಬೇಕಾಗುತ್ತದೆ. ಆದರೆ, ನೆನಪಿಸಿ.. ಈ ಜೀವನ ಪಾಠ ಖಾಸಗಿ ಶಾಲೆಗಳಲ್ಲಿ ಸಿಗುವುದಿಲ್ಲ. ಅದು ಸಿಗುವುದೇ ಸರ್ಕಾರಿ ಶಾಲೆಗಳಲ್ಲಿ. ಹಲವು ವರ್ಗದ ಮಕ್ಕಳು ಅಲ್ಲಿಗೆ ಬರುತ್ತಾರೆ. ಅಲ್ಲಿ ಇಂಗ್ಲಿಷ್ ಮೀಡಿಯಂನಂತೆ ಶಿಸ್ತು ಇರುವುದಿಲ್ಲ ನಿಜ. ಈ ಅಶಿಸ್ತಿನಲ್ಲೇ ಒಬ್ಬರಿಗೊಬ್ಬರು ಮಕ್ಕಳು ಆಪ್ತರಾಗುತ್ತಾರೆ. ಅವರಿಗೆ ಅಂಕಗಳಿಕೆ ಆಸೆ ಇರುವುದಿಲ್ಲ. ಅಂಕಗಳಿಕೆ ಆಸೆ ಇದ್ದಲ್ಲೇ ಮಕ್ಕಳು ಮಾನಸಿಕ ಒತ್ತಡಕ್ಕೆ ಒಳಗಾಗುತ್ತಾರೆ. ಸರ್ಕಾರಿ ಶಾಲೆಗಳಲ್ಲಿ ಹೋಮ್‌ವರ್ಕ್ ಬಹುತೇಕ ಕೊಡುವುದಿಲ್ಲ. ಖಾಸಗಿ ಶಾಲೆಗಳಲ್ಲಿ ಹೀಗಾಗಲ್ಲ. ಅಲ್ಲಿ ಶಾಲೆಯಲ್ಲೂ ಓದಬೇಕು ಮತ್ತು ಸಾಕಷ್ಟು ಹೋಮ್‌ವರ್ಕ್ ಕೊಟ್ಟಿರುತ್ತಾರೆ. ಮಗು ಮನೆಯಲ್ಲಿ ಬಂದು, ಅದನ್ನು ಪೂರ್ಣಗೊಳಿಸಿಯೇ ಹೋಗಬೇಕು. ಇದು ಮಕ್ಕಳ ಖಾಸಗಿ ಸಮಯವನ್ನು (ಅಂದರೆ ಆಟದ ಸಮಯ, ತಂದೆ–ತಾಯಿ, ಅಣ್ಣ–ತಮ್ಮ ಜತೆ ಮಾತನಾಡುವ ಸಮಯ) ಕಿತ್ತುಕೊಳ್ಳುತ್ತದೆ. ಸರ್ಕಾರಿ ಶಾಲೆಗಳಲ್ಲಿ ಹಾಗಲ್ಲ. ಶಾಲೆಯಲ್ಲಿ ವಿದ್ಯಾರ್ಥಿಗಳಾಗಿ, ಮನೆಯಲ್ಲಿ ತುಂಟ ಮಕ್ಕಳಾಗಿಯೇ ಇರುತ್ತಾರೆ ಮತ್ತು ಹೀಗೇ ಇರುವುದು ಸರಿಯಾದ ಜೀವನ. ಇವೆಲ್ಲ ಕೇವಲ ಉದಾಹರಣೆಗಳು. ಮಕ್ಕಳಿಗೆ ಓದು ಎಷ್ಟು ಮುಖ್ಯವೋ, ಅಷ್ಟೇ ಮುಖ್ಯ ಮನೆಯಲ್ಲಿ ಫ್ರೀ ಆಗಿ ಇರುವುದು. ಮಕ್ಕಳು ತಮ್ಮ ಮೇಲೆ ಎಷ್ಟು ಒತ್ತಡ ತಡೆದುಕೊಳ್ಳಲು ಸಾಧ್ಯವೋ ಅಷ್ಟೇ ಶಿಕ್ಷಣ ಇರಬೇಕು. ಉಳಿದ ಸಮಯದಲ್ಲಿ ಆಟ–ಊಟ, ನಿದ್ದೆ.. ಹೀಗೆ ಇತರ ಚಟುವಟಿಕೆಗಳು ಮಕ್ಕಳಿಗೆ ಮುಖ್ಯ. ಸರ್ಕಾರಿ ಶಾಲೆಗಳ ವಾತಾವರಣವೇ ಮಕ್ಕಳ ಜೀವನ ಕಲಿಕೆಗೆ ಪೂರಕ. ಅವರ ಮನಸ್ಸೂ ಗಟ್ಟಿಯಾಗುತ್ತಾ ಹೋಗುತ್ತದೆ. ಅದೇ ಖಾಸಗಿ ಶಾಲೆ ಮಕ್ಕಳನ್ನು ಒಮ್ಮೆ ಗಮನಿಸಿ. ಅವರ ಮನಸ್ಸು ಇವರಷ್ಟು ಗಟ್ಟಿಯಾಗುವುದು ಕಷ್ಟ. ಹಾಗಂತ ಜೀವನಪೂರ್ತಿ ಸರ್ಕಾರಿ ಶಾಲೆಗಳಲ್ಲೇ ಓದಿಸಿ ಎಂದು ಹೇಳೋದಿಲ್ಲ. ಉನ್ನತ ಶಿಕ್ಷಣ (ಎಸ್ಸೆಸ್ಸೆಲ್ಸಿ ನಂತರ) ಬಂದಾಗ ಅವರು ಖಾಸಗಿ ಶಾಲೆಗಳಲ್ಲೇ ಓದಲಿ. ಯಾಕೆಂದರೆ ಅಷ್ಟರಲ್ಲಾಗಲೇ ಅವರಿಗೆ ಜೀವನಪಾಠ ಅರ್ಥವಾಗಿರುತ್ತದೆ ಮತ್ತು ಮನಸ್ಸು ಸಹ ಸದೃಢವಾಗಿರುತ್ತದೆ. ಪ್ರಾಥಮಿಕ ಹಂತದಲ್ಲಿ ಮಕ್ಕಳಿಗೆ ಸರ್ಕಾರಿ ಶಾಲೆಯೇ ಬೆಸ್ಟ್. ಮೇಲಾಗಿ ಶುಲ್ಕವೂ ಕನಿಷ್ಠಮಟ್ಟದಲ್ಲಿ ಇರುತ್ತದೆ. ಉಚಿತವಾಗಿ ಊಟ ಇರುತ್ತದೆ. ಉಚಿತವಾಗಿ ಬಟ್ಟೆ ಇರುತ್ತದೆ. ಇದು ಆರ್ಥಿಕ ಉಳಿತಾಯಕ್ಕೂ ಕಾರಣವಾಗುತ್ತದೆ ಎಂಬುದನ್ನು ಮರೆಯದಿರಿ.

# ನನ್ನ ಮಾತೇ ವೇದವಾಕ್ಯ ಇದು ಎಲ್ಲಾ ಕಾಲಕ್ಕೂ ಸಲ್ಲುವುದಿಲ್ಲ!.

ನಮ್ಮಲ್ಲಿ ಕೆಲ ಸಿನಿಕತನಗಳಿವೆ, ಲಾಜಿಕ್ಕೇ ಇಲ್ಲದ ಹಮ್ಮು–ಬಿಮ್ಮುಗಳಿವೆ ಮೊದಲು ಅವುಗಳನ್ನು ನಾವು ತೊರೆಯಬೇಕಾಗಿದೆ ಮತ್ತು ನಮ್ಮನ್ನು ನಾವು ಹೊಸ ಹೊಸ ವೈಚಾರಿಕತೆಗಳಿಗೆ ತೆರೆದುಕೊಳ್ಳಬೇಕಾಗಿದೆ.

ಅದು ಹೇಗೆ ಎಂದರೆ ಮೊದಲಿನಿಂದಲೂ ನಮ್ಮ ಕೌಟಂಬಿಕ ವ್ಯವಸ್ಥೆಯಲ್ಲಿ ಪುರುಷ ಪ್ರಧಾನ ಪದ್ಧತಿ ಮತ್ತು ಕೆಲವು ಕಡೆ ಮಹಿಳಾ ಪ್ರಧಾನ ಪದ್ಧತಿಗಳು ಇರುವುದು ನಮಗೆಲ್ಲ ಗೊತ್ತಿರುವ ಸಂಗತಿಯೇ. ನಾವಿಲ್ಲಿ ಮನೆಯಲ್ಲಿನ ಹಿರಿಯ ವ್ಯಕ್ತಿ/ಯಜಮಾನ ಎಂದು ತೆಗೆದುಕೊಳ್ಳುವುದಾದರೆ ಅವರುಗಳು ಅದನ್ನೇ ಕಿರೀಟವೆಂಬಂತೆ ತಲೆಯ ಮಟ್ಟಕ್ಕೆ ತೆಗೆದುಕೊಂಡು ಮನೆಯ ಹಿರಿಯ ಯಜಮಾನ/ಮಾನಿ ಮನೆಯ ಅಗತ್ಯಗಳನ್ನೆಲ್ಲ ಹೊಂದಿಸಿಕೊಡುವವರು, ನಾಲ್ಕು ಜನಕ್ಕೆ ಮನೆಯಿಂದ ಆಚೆ ಪರಿಚಯವಿರುವವರು ಎನ್ನುವ ಕಾರಣಕ್ಕೆ ನಮ್ಮದೇ ಮಾತು ನೆಡೆಯಬೇಕು, ನಾನು ಹೇಳಿದ್ದೇ ಸರಿ ಮತ್ತದನ್ನೇ ಎಲ್ಲರೂ ಒಪ್ಪಿಕೊಳ್ಳಬೇಕು, ಎನ್ನುವ ಆಲಿಖಿತ ಫಾರ್ಮಾನು ಇದೆಯಲ್ಲ ಇದನ್ನು ಮೊದಲು ತಿದ್ದಿಕೊಳ್ಳಬೇಕು. ಏಕೆಂದರೆ ಇಂತಹ ಮನಸ್ಥಿತಿ ಮಕ್ಕಳ ಮಾನಸಿಕ, ಶೈಕ್ಷಣಿಕ ಮತ್ತು ಮತ್ತು ಸಮಾಜಿಕ ಬೆಳವಣಿಗೆಯ ದೃಷ್ಠಿಕೋನದಿಂದ ಸರಿಹೊಂದುವುದಿಲ್ಲ.

ಮಾತಿಗೂ ಮೊದಲೆ ಏನೋ ಎಷ್ಟೆಲ್ಲ ಮಾತಾಡ್ತಾ ಇದ್ದೀಯಾ, ನನ್ನ ಕಾಲಿಗೆ ಆಗಿರುವಷ್ಟು ವಯಸ್ಸಾಗಿಲ್ಲ ನಿನಗೆ, ಇನ್ನು ತಲೆಯ ಮೇಲಿನ ಮಾಂಸ ಆರಿಲ್ಲ ಆಗಲೆ ತುಂಬಾ ಚಿಗಿರಿಕೊಳ್ಳುತ್ತಿದ್ದೀಯಾ, ನೀ ಇನ್ನು ನೋಡೋದು ಬಹಳ ಇದೆ ಸುಮ್ಮನೆ ನಾನು ಹೇಳಿದ್ದನ್ನು ಕೇಳು, ನಾನು ಹೇಳುತ್ತಿರುವುದೇ ಸರಿಯಾಗಿರುತ್ತದೆ, ಎನ್ನುವಂತ ಮಾತು ಎಷ್ಟು ಸರಿ ಹೇಳಿ? ಒಪ್ಪಿಕೊಳ್ಳೋಣ ಅವರ ಅನುಭವ ದೊಡ್ಡದು ಜೀವನದಲ್ಲಿ ಅನೇಕ ಏಳುಬೀಳುಗಳನ್ನು ಕಂಡಿದ್ದಾರೆ, ನಾಲ್ಕಾರು ರೀತಿಯ ಜನರನ್ನು ನೋಡಿದ್ದಾರೆ ಅವರು ಹೇಳುವುದರಲ್ಲಿ ಅರ್ಥವಿದೆ ಎನ್ನುವುದು ಎಷ್ಟು ಸತ್ಯವೊ ಅಷ್ಟೆ ನಿಜಾಯಿತಿಯಿಂದ ಇವತ್ತಿನ ನಾಲ್ಕನೇಯ ತರಗತಿಯಲ್ಲಿ ಓದುತ್ತಿರುವ ಮಗು ರಾಕೇಟ್, ಸೆಮಿಕಂಡ್ಕ್ಟರ್ ಮುಂದುವರಿದು ಸೈನ್ ತೀಟ –ಕಾಸ್ ತೀಟ ಅಂದರೆ ನಿನಗೆ ಗೊತ್ತೇನಪ್ಪ ಅಂದುಬಿಟ್ಟರೆ! ನಮಗೆಲ್ಲ ಗೊತ್ತಿದೆ ಸ್ನೇಹಿತರೆ ಒಂದು ಕಾಲದಲ್ಲಿ ನಾನು, ನನ್ನ ಅಕ್ಕ ಅಣ್ಣಂದಿರು ಒಟ್ಟಿಗೆ ಸೇರಿಸಿ ತೆಗೆದುಕೊಳ್ಳುವಷ್ಟು ಅಂಕಗಳನ್ನು ಈಗ ನಮ್ಮ ಮಕ್ಕಳು ಒಬ್ಬರೆ ತೆಗೆದುಕೊಳ್ಳುತ್ತಿದ್ದಾರೆ! ಇದು ನಮ್ಮ ಕಣ್ಣುಮುಂದೆ ಇರುವ ಸತ್ಯ ಅಲ್ಲವೇ? ಹಾಗಂತ ಬುದ್ದಿವಂತಿಕೆಯನ್ನು ಕೇವಲ ಅಂಕಗಳಿಂದ ಅಳೆಯಬೇಕು ಎಂದೇನೂ ಇಲ್ಲ, ಜೊತೆಗೆ ಇಂದಿನ ಪೀಳಿಗೆ ತುಂಬಾ ಸ್ಮಾರ್ಟ್ ಆಗಿದ್ದಾರೆ ಹಳಬರೆಲ್ಲ ಈ ಮಟ್ಟಕ್ಕ ಇಲ್ಲ ಬಿಡಿ ಅಂತಲ್ಲ.

ಮನುಷ್ಯರಾದ ನಾವೆಲ್ಲರೂ ಇಲ್ಲಿ ಸರಳ ಮನುಷ್ಯನ ನ್ಯೂನತೆಗಳನ್ನು ಹೊರತುಪಡಿಸಿ ಸಹಜ ಮಾನವೀಯ ನೆಲೆಗಟ್ಟಿನಲ್ಲಿ ನೋಡುವುದರ ಜೊತೆ ಜೊತೆಯಲ್ಲಿ ಸಹಜತೆಯನ್ನು ಒಪ್ಪಿಕೊಳ್ಳುವಂತಹ, ಸೌಹಾರ್ದತೆಯನ್ನು ಬೆಸೆಯುವಂತಹ ಉನ್ನತ ವಿಚಾರಗಳನ್ನು ನಮ್ಮದಾಗಿಸಿಕೊಳ್ಳಬೇಕು. ವಯೋ ಸಹಜ ಪ್ರೌಢಮೆ ಒಂದು ಕಡೆಯಾದರೆ ವ್ಯವಹಾರಿಕ, ಜ್ಞಾನಾತ್ಮಕ,ಅರ್ಜಿತ, ವಿಶಿಷ್ಠವಾದಂತಹ ಹಿರಿಮೆಗಳನ್ನು, ಗರಿಮೆಗಳನ್ನು ಒಪ್ಪಿಕೊಳ್ಳುವಂತಹ ವೈಚಾರಿಕ ಪ್ರೌಢಮೆಯನ್ನು ಕಾಲ, ಪ್ರದೇಶ, ಜನರಿಗೆ ತಕ್ಕಂತೆ ರೂಢಿಸಿಕೊಳ್ಳಬೇಕು ಅಲ್ಲವೆ? ಇಲ್ಲಿ ನಾವು ಗಮನಿಸಬೇಕಿರುವುದು "ಕಲಿಕೆ" ಎನ್ನುವುದು ಮಾತ್ರ ಈ ಕಲಿಕೆ ಎನ್ನುವುದು ನಿರಂತರ ಆದರೆ "ಜ್ಞಾನ" ಎನ್ನುವುದು ಕಾಲದಿಂದ ಕಾಲಕ್ಕೆ ದೇಶದಿಂದ ದೇಶಕ್ಕೆ ಅವರವರ ಅಗತ್ಯತೆಗೆ, ಅನುಕೂಲಕ್ಕೆ ಅವರ ಜಾಣ್ಮೆಗೆ ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ಎಟುಕುವಂತಹದ್ದು. ಕೋಪರ್ ನಿಕಾಸನ "ಸೌರ ಕೇಂದ್ರ ಸಿದ್ದಾಂತ" ಬರುವ ಮೊದಲು ಆಕಾಶದ ಎಲ್ಲಾ ಕಾಯಗಳು ಭೂಮಿಯನ್ನು ಕೇಂದ್ರವಾಗಿಟ್ಟುಕೊಂಡು ಸುತ್ತುತ್ತವೆ! ಎನ್ನುವ "ಭೂ ಕೇಂದ್ರ ಸಿದ್ದಾಂತ" ಚಾಲ್ತಿಯಲ್ಲಿತ್ತು. ಆದರೆ ಕಾಲಾನುಕ್ರಮದಲ್ಲಿ ಅದು ಹಾಗಲ್ಲ ಭೂಮಿ ಒಂದು ಗ್ರಹ ಅಷ್ಟೇ, ಸೂರ್ಯನನ್ನು ಸೌರಮಡಲದ ಎಲ್ಲಾ ಗ್ರಹಗಳು ಸುತ್ತುತ್ತವೆ ಎನ್ನುವುದನ್ನು ಮೊದಲು ಹೇಳಿದ ಕೋಪರ್ ನಿಕಾಸನನ್ನು ಬೀದಿಗಳಲ್ಲಿ ಕಲ್ಲಿನಿಂದ ಹೊಡೆದು ಸಾಹಿಸಿದರಂತೆ! ಇವನು ತಪ್ಪಾಗಿ ಹೇಳುತ್ತಿದ್ದಾನೆ ಎಂದು.

ಆದರೆ ನಾವಿಂದು ಅನೇಕ ಪ್ರಯೋಗಗಳ ಮೂಲಕ ಸತ್ಯವನ್ನು ಒಪ್ಪಿಕೊಂಡಿದ್ದೇವೆ ಅಲ್ಲವೆ? ಹಾಗಾಗಿ ಈ ಹಮ್ಮು ಬಿಮ್ಮುಗಳನ್ನು ಬಿಟ್ಟು ಅದರಲ್ಲೂ ಮಕ್ಕಳ ವಿಚಾರದಲ್ಲಿ ಅವರ ಅಭಿಪ್ರಾಯಕ್ಕೆ ಅವಕಾಶ ಮಾಡಿಕೊಟ್ಟು ಅವರನ್ನು ಪ್ರೋತ್ಸಾಹಿಸಬೇಕು. ಆಗ ಮಾತ್ರ ಹಿರಿಯರ ಹಿರಿತನದ ಫಲವನ್ನು ಮಕ್ಕಳು ಪಡೆದುಕೊಳ್ಳಬಹುದು. ಏಕೆಂದರೆ ಹಿರಿಯರು ಅನುಭವಿಗಳು, ಮನೆಯ ಎಲ್ಲ ಸಂಪನ್ಮೂಲಗಳನ್ನು ನಿಯಂತ್ರಿಸುವವರು, ಮನೆಯ ಸರ್ವಾಂಗೀಣ ಏಳ್ಗೆಗೆ ಬದ್ದರಾಗಿರುವವರು, ಮನೆಯ ಎಲ್ಲರಿಗೂ ದಾರಿ ತೋರಿಸುವಾತ ನಿಜವಾದ ಹಿರಿಯ ವ್ಯಕ್ತಿಯಾಗುತ್ತಾನೆ.





**ಜಿ. ಶಿವಕುಮಾರ್ ಸೋಗಿ,**
**ಕಾರವಾರ, ಕೈಗಾ.**

ಹೀಗೆ ಎಲ್ಲದೂ ಸರಿಯೆ, ಆದರೆ ಕಾಲ, ಸಮಯ, ಸಂದರ್ಭ ಮತ್ತು ಇಂದಿನ ಅಗತ್ಯತೆಗಳು ನಮ್ಮ ಅವಶ್ಯಕತೆಗಳು ನಮ್ಮ ನಮ್ಮ ಅನಿವಾರ್ಯತೆಗಳು ಬದಲಾಗಿವೆಯಲ್ಲ, ಅದಕ್ಕೆ ತಕ್ಕಂತೆ ನಾವು ಬದಲಾಗಬೇಕಲ್ಲವೆ? ಇತರರ ಅಭಿಪ್ರಾಯಗಳನ್ನು ಆಲಿಸಬೇಕಲ್ಲವೆ? ಹಾಗಾಗಿ ಮನೆಯಲ್ಲಿ ಮಕ್ಕಳಿಂದ ಹಿಡಿದು ಮುದಕರವರೆಗೆ ಎಲ್ಲರು ಇತರರ ಅಭಿಪ್ರಾಯಗಳನ್ನು ಗಣನಿಗೆ ತೆಗೆದುಕೊಳ್ಳಬೇಕು ಮತ್ತು ಸರಿಯಾಗಿದ್ದರೆ ಅವರನ್ನೂ ಅನುಮೋದಿಸಬೇಕು ಕೂಡ.

ಇನ್ನು ಇದು ಮನೆಯಲ್ಲಿ ಇರುವ ಸಣ್ಣ ಮಕ್ಕಳ ವಿಚಾರದಲ್ಲಿ ಸಹ ಮಹತ್ತರವಾದ ಬದಲಾವಣೆಗೆ ಕಾರಣವಾಗುತ್ತದೆ. ಬೇಕಿದ್ದರೆ ನಿಮ್ಮ ನಿಮ್ಮ ಮನೆಯಲ್ಲಿ ಅಳವಡಿಸಿ ನೋಡಿ. ಹೇಗೆಂದರೆ,

**ಮನೆಯಲ್ಲಿ ಪಾಲಕರು ಮಾಡಬೇಕಾದ ಜವಾಬ್ದಾರಿಗಳು:**

1–ಮನೆಯ ಎಲ್ಲಾ ಅಲ್ಲದಿದ್ದರು ಬಹುಮುಖ್ಯ ವಿಚಾರಗಳನ್ನು ನಿರ್ಧರಿಸುವಾಗ ನಿಮ್ಮ ಮಕ್ಕಳು ಜೊತೆಯಲ್ಲಿರಲಿ.

2–ಆಟಿಕೆ, ಪುಸ್ತಕ, ಮನೆಗೆ ಅಗತ್ಯ ಸಾಮಾನುಗಳನ್ನು ಖರೀದಿಸುವಾಗ ನಿಮ್ಮ ಮಕ್ಕಳ ಅಭಿಪ್ರಾಯಕ್ಕೆ ಮನ್ನಣೆ ಕೊಡಿ.

3–ಸಣ್ಣ ಪುಟ್ಟ ಜವಾಬ್ದಾರಿಗಳನ್ನು ನಿಮ್ಮ ಮಕ್ಕಳಿಗೆ ನೀಡಿ ಮತ್ತು ಅದರ ಪರಿಣಾಮದ ಸಮಯದಲ್ಲಿ ಧನಾತ್ಮಕ ಅಂಶಗಳನ್ನು ಪ್ರೋತ್ಸಾಹಿಸಿ.
4–ನಿಮ್ಮ ಮಕ್ಕಳ ಸಣ್ಣ ಸಣ್ಣ ಗೆಲುವುಗಳನ್ನು ಹೆಮ್ಮೆಯಿಂದ ಆಚರಿಸಿ.
5–ನಿಮ್ಮ ಮಕ್ಕಳ ಜವಾಬ್ದಾರಿಯನ್ನು ಸ್ಪಷ್ಟವಾಗಿ ತಿಳಿಸಿ ಮತ್ತು ಸದಾ ಅವರ ಬೆಂಬಲಕ್ಕೆ ನಿಲ್ಲಿ ಹಾಗು ಅವರಲ್ಲಿ ಅವರ ಕಾರ್ಯದ ಕುರಿತ ಹೆಮ್ಮೆಯನ್ನು ಅವರು ಖುದ್ದಾಗಿ ಅನುಭವಿಸುವಂತೆ ಮಾಡಿ.

ಆಗ ನೋಡಿ ನಮ್ಮ ಮಕ್ಕಳಲ್ಲಿ ಪ್ರತಿ ಮನೆ ಮನೆಯಲ್ಲೂ ಒಂದು ಬದಲಾವಣೆಯನ್ನು ನಾವು ಗಮನಿಸಬಹುದು ಅದೇನಂದರೆ,

**ನಮ್ಮ ಮಕ್ಕಳಲ್ಲಿ ಕಾಣಬಹುದಾದ ಬದಲಾವಣೆಗಳು:**

1–ಮನೆಯ ಎಲ್ಲಾ ಅಲ್ಲದಿದ್ದರೂ ಪ್ರಮುಖ ವಿಚಾರಗಳನ್ನು ರ್ಧರಿಸುವಾಗ ನನ್ನನ್ನು ಗಮನಕ್ಕೆ ತೆಗೆದುಕೊಳ್ಳುತ್ತಾರೆ ಎನ್ನುವು ಅರಿವು ಉಂಟಾಗಿ ಮಕ್ಕಳು ತನ್ನ ವರ್ತನೆಯಲ್ಲಿ ಗಂಭೀರತೆಯನ್ನು ತಂದುಕೊಳ್ಳುತ್ತಾರೆ.

2–ಪ್ರತಿಯೊಂದು ಕಾರ್ಯದಲ್ಲಿ ಅವರ ಇರುವಿಕೆಯನ್ನು ಖಾತ್ರಿ ಪಡಿಸುವುದರಿಂದ ಅಲ್ಲಿ ನೆಡೆದ, ಇರುವ ಎಲ್ಲವೂ ನನ್ನದೆನ್ನುವ ಬಾವ ಜಾಗ್ರತವಾಗುತ್ತದೆ.

3–ಸಣ್ಣ ಸಣ್ಣ ಜವಾಬ್ದಾರಿಗಳನ್ನು ನಿಭಾಯಿಸಿ ಜಯಗಳಿಸಿದಾಗ ಅವರಲ್ಲಿನ ಹೆಮ್ಮೆಯ ಭಾವನೆ ಜಾಗ್ರತವಾಗುತ್ತದೆ ಮತ್ತು ಮೊಗದೊಂದು ಜವಾಬ್ದಾರಿಯನ್ನು ಕೈಗೆತ್ತಿಕೊಳ್ಳಲು ಪ್ರೇರಣೆಯಾಗುತ್ತದೆ, ಹಾಗೆಯೇ ಸೋತಾಗ ಅದನ್ನು ಒಪ್ಪಿಕೊಂಡು ಜಾಗ್ರತವಾಗುವ ಮನಸ್ಥಿತಿ ಉಂಟಾಗುತ್ತದೆ.

4–ಗೆಲುವಿನ ಸಂಭ್ರಮದಲ್ಲಿ ಮತ್ತು ಸೋಲಿನ ಸಮಯದಲ್ಲಿ ಪಾಲಕರು ನಮ್ಮೊಂದಿಗೆ ಇರುತ್ತಾರೆ ಎನ್ನುವ ಅಂಶ ಅವರಿಗೆ ಮನದಟ್ಟಾಗುತ್ತದೆ.
5–ಮಕ್ಕಳಿಗೆ ಅವರ ಜವಾಬ್ದಾರಿ ಮತ್ತು ಅದಕ್ಕೆ ಬೇಕಾದ ಯೋಜನೆ, ಪ್ರಯತ್ನಗಳ ಯೋಚಿಸಲು ಮುಕ್ತತೆ ಸಿಕ್ಕಂತಾಗಿ ಆ ಕಾರ್ಯದ ಲಾಭ–ನಷ್ಟಗಳ ಜವಾಬ್ದಾರಿಯನ್ನು ಅವರೇ ಹೊತ್ತುಕೊಳ್ಳಲು ಅಣಿ ಯಾಗುತ್ತಾರೆ. ಹಾಗಾಗಿ ಮನೆಯಲ್ಲಿ ಪಾಲಕರಾದ ನಾವು ನಮ್ಮ ಹಮ್ಮು–ಬಿಮ್ಮುಗಳನ್ನು ಬಿಟ್ಟು ನಮ್ಮವರ ಅದರಲ್ಲೂ ವಿಶೇಷವಾಗಿ ನಮ್ಮ ಮಕ್ಕಳ ಮಾತುಗಳನ್ನು ಆಲಿಸಬೇಕು ಅವರ ಅಭಿಪ್ರಾಯಕ್ಕೂ ಬೆಲೆಕೊಡಬೇಕು, ತಾತ ಮುತ್ತಾರ ಕಾಲದಿಂದ ನೆಡೆದ ಬಂದಿದ್ದು, ನಾವು ನಮ್ಮ ಹಿರಿಯರ ಮುಂದೆ ನಿಂತು ಮಾತನಾಡತಿರಲಿಲ್ಲ ಅವರು ಹೇಳಿದ್ದನ್ನು ಯಾವುದೇ ಕಾರಣಕ್ಕೂ ತೆಗೆದು ಹಾಕುತ್ತಿರಲಿಲ್ಲ ಎಂಬುವಂತಹ ಮಾತನ್ನು ಆಗಾಗ ಕೇಳುತ್ತಿರುತ್ತೇವೆ ಅಲ್ಲವೆ. ಜೊತೆಗೆ ಈಗಿನ ಮಕ್ಕಳಿಗೆ ಹಿರಿಯರ ಬಗ್ಗೆ ಗೌರವ ಆದರಗಳು ಇಲ್ಲ ಹೀಗೆ ಬಿಟ್ಟರೆ ಮಕ್ಕಳದ್ದೇ ಜೀವನ ಹಾಳಾಗುತ್ತದೆ ಎಂಬುವ ಕಾಳಜಿ ಸರಿಯಾದುದ್ದೆ, ಆದರೆ ತಿದ್ದಿಕೊಳ್ಳಲು ಇರುವಂತಹ ಅವಕಾಶವನ್ನು ಬಿಡಬಾರದಲ್ಲವೆ? ಹಿರಿಯರಾದ ಮಾತ್ರಕ್ಕೆ ನಮ್ಮಲ್ಲಿ ಕೊರೆತೆಗಳೇ ಇಲ್ಲವೆಂದೇನಿಲ್ಲವಲ್ಲ, ಹೇಗೆ ಬಿಡುವುದು ಎಂದು ಯೋಚಿಸುವುದಕಿಂತ, ಒಮ್ಮೆ ಮಕ್ಕಳ ಮಾತಿಗೂ ಮನ್ನಣೆ ಕೊಟ್ಟು ನೋಡಿ, ನಿಮ್ಮ ಮಕ್ಕಳಿಗೂ ಆ ಜವಾಬ್ದಾರಿಯನ್ನು ಕೊಟ್ಟುನೋಡಿ ನಿಮಗೂ ಮತ್ತು ಮನೆಯ ಹಿರಿಯರಿಗೂ ಹೆಸರು ತಂದಾರು!

ಇಲ್ಲದಿದ್ದರೇನಂತೆ ಅಂದುಕೊಂಡ ಕಾರ್ಯ, ಆಗಬೇಕಿದ್ದ ಕೆಲಸ ಆಗದೇ ಇರಬಹುದು ಅಷ್ಟೇ ತಾನೆ ಅದು ಸಹ ಕಲಿಕೆಯ ಒಂದು ಆಯಾಮವಲ್ಲವೆ, ಕಲಿಕೆಯಲ್ಲಿನ "ಹೀಗೆ ಮಾಡಬಾರದಿತ್ತು" ಎನ್ನುವ ತಿಳುವಳಿಕೆಯಾದರೂ ಬರುತ್ತದೆಯಲ್ಲ. ಅದಕ್ಕೆ ಹೇಳಿದ್ದು "ನನ್ನ ಮಾತೇ ವೇದವಾಕ್ಯ– ಇದು ಎಲ್ಲಾ ಕಾಲಕ್ಕೂ ಸಲ್ಲುವುದಿಲ್ಲ! ಎನ್ನುವುದನ್ನು ಪ್ರತಿಯೊಬ್ಬ ಪಾಲಕರೂ ಮನಗಾಣಬೇಕು, ಆಗ ಮಾತ್ರ ನಾವು ನಮ್ಮ ಮಕ್ಕಳಲ್ಲಿರುವ ಸುಪ್ತವಾದ ಪ್ರತಿಭೆಯನ್ನು, ಅವರಲ್ಲಿನ ವಿವಿಧ ಕೌಶಲ್ಯಗಳನ್ನು ಕಾಣಬಹುದಾಗಿದೆ. ತನ್ಮೂಲಕ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಪೂರಕ ವಾತವರಣವನ್ನು ಕಲ್ಪಿಸಿ ಪ್ರೇರೇಪಿಸಿ, ಪೋಶಿಷಿಸಿ, ಪ್ರೋತ್ಸಾಹಿಸಿದಂತಾಗುತ್ತದೆ ಅಲ್ವೆ? ಯೋಚಿಸಿ ನೋಡಿ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com


**IN THE COURT OF THE CIVIL JUDGE AND J.M.F.C.AT KUDLIGI, Crl. Misc. No.355 /2023**

Between:
1) Goudru Kotrappa son of late Goudru Sanna Kodadappa aged about 65 years Hindu agriculturist, resident of Eachalabommanahalli village in Kudligi Taluk, Vijayanagara District. ........ Petitioner

And

The Tahasildar Kudligi ...........Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioner has instituted above petition to get the death certificate of his deceased Petitioner Father by Name G.Sanna Kodadappa son of late Patreppa was died on 08/02/1971 at Eachalabommanahalli village in Kudligi Taluk, Vijayanagara District. On the file of the civil Judge & JMFC at Kudligi. The Tahasildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 27/12/2023 at 11 A.M. and interested persons are directed to produce all the documents upon which you intended to rely in support of your defense.

Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 18/10/2023.

By Order of the court
Chief Ministerial officer
Civil Judge and J.M.F.C Kudligi

Swaroopanada Naik.L
Advocate, Kudligi

**IN THE COURT OF THE CIVIL JUDGE AND J.M.F.C.AT KUDLIGI. Crl. Misc. No.906/2023**

Between:
1) Papaiah son of late Shankraiah, aged about 69 years Hindu agriculturist, resident of Sutta Kaarnarahatti village in Kudligi Taluk, Vijayanagara District. ...Petitioner

And

The Tahasildar Kudligi ...Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioner has instituted above petition to get the death certificate of his deceased Petitioner Father by Name Shankraiah son of late Jagal Papapaiah was died on 08/09/2003 at Sutta Kaarnarahatti village in Kudligi Taluk, Vijayanagara District. On the file of the civil Judge & JMFC at Kudligi. The Tahasildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 26/12/2023 at 11 A.M. and interested persons are directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 12/12/2023.

By Order of the court
Chief Ministerial officer
Civil Judge and J.M.F.C Kudligi

Swaroopanada Naik.L
Advocate, Kudligi

**IN THE COURT OF THE CIVIL JUDGE AND J.M.F.C.AT KUDLIGI. Crl. Misc. No.905/2023**

Between:
1) Papaiah son of late Shankraiah, aged about 69 years Hindu agriculturist, resident of Sutta Kaarnarahatti village in Kudligi Taluk, Vijayanagara District. ....Petitioner

And

The Tahasildar Kudligi ....Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioner has instituted above petition to get the death certificate of his deceased Petitioner Mother by Name Sanna Obamma Wife of late Shankraiah was died on 01/06/1991 at Sutta Kaarnarahatti village in Kudligi Taluk, Vijayanagara District. On the file of the civil Judge & JMFC at Kudligi. The Tahasildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 26/12/2023 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 12/12/2023.

By Order of the court
Chief Ministerial officer
Civil Judge and J.M.F.C Kudligi

Swaroopanada Naik.L
Advocate, Kudligi

**IN THE COURT OF THE CIVIL JUDGE AND J.M.F.C.AT KUDLIGI Crl. Misc. No.273/2023**

Between: 1) Durgamma D/O Late Shidlappa aged about 62 years, 2) Siddappa son of late Sidlappa aged about 60 years, 3) Harijan Rajaiah @ Rajappa aged about 48 years, 4) Smt.Obamma wife of late Nagappa aged about 63 years, 5) Smt.Renuka.H wife of late Nagappa aged about 46, 6) H.uday Kumar son of late Channappa aged about 36 years,
All are Hindu agriculturist resident of Chandrashekharapuru Village in Kudligi Taluk, Vijayanagara District. ...Petitioner

And

The Tahasildar Kudligi ...Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioner has instituted above petition to get the death certificate of his deceased Petitioner No.1 to 3's brother petitioner No's 4 and 5's brother –in law petitioner No's Father by Name H.Channappa son of late Sidlappa was died on 25/04/2006 at Chandrashekharapura village in Kudligi Taluk, Vijayanagara District. On the file of the civil Judge & JMFC at Kudligi. The Tahasildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 27/02/2024 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 16/12/2023.

By Order of the court
Chief Ministerial officer
Civil Judge and J.M.F.C Kudligi
H.Ravi
T.Hanumanthappa
Advocate, Kudligi

**IN THE COURT OF THE CIVIL JUDGE AND J.M.F.C.AT KUDLIGI Crl. Misc. No.266/2023**

Between: 1) Durgamma D/O Late Shidlappa aged about 62 years, 2) Siddappa son of late Sidlappa aged about 60 years, 3) Harijan Rajaiah @ Rajappa aged about 48 years, 4) Smt.Obamma wife of late Nagappa aged about 63 years, 5) Smt.Renuka.H wife of late Nagappa aged about 46, 6) H.uday Kumar son of late Channappa aged about 36 years,
All are Hindu agriculturist resident of Chandrashekharapuru Village in Kudligi Taluk, Vijayanagara District. ....Petitioner

And

The Tahasildar Kudligi ...Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioner has instituted above petition to get the death certificate of his deceased Petitioner No.1 to 3's Mother petitioner No's 4 and 5's Mother –in law petitioner No 6's grandmother by Name Palamma wife of late Sidlappa was died on 25/06/2011 at Chandrashekharapura village in Kudligi Taluk, Vijayanagara District. On the file of the civil Judge & JMFC at Kudligi. The Tahasildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 28/12/2023 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 15/12/2023.

By Order of the court
Chief Ministerial officer
Civil Judge and J.M.F.C Kudligi

H.Ravi, T.Hanumanthappa
Advocate, Kudligi

## ಕವಿ ಮನಸು

### ಕಾಣದ ದೇವರಿಗೆ

ಕಣ್ಣಿಗೆ ಕಾಣದ ದೇವರೆ
ನೀ ಹರಿಯೊ? ಹರನೋ?
ನಾವು ಕಾಣೆವು .

ಕಣ್ಣಿಗೆ ಕಂಡ ದೇವರು
ತಂದೆ, ತಾಯಿ, ಗುರು ಹಿರಿಯರೆಂದು
ನಾವು ಅರಿವೆವು.

ತುತ್ತು ಕೊಟ್ಟ ತಾಯಿ
ಮುತ್ತು ಕೊಟ್ಟ ತಂದೆ
ವಿದ್ಯೆ ಕೊಟ್ಟ ಗುರುವನ್ನು
ಗರ್ವದಲ್ಲಿ ತೊರೆದೆವು.
ನಾನೇ ದೊಡ್ಡವನೆಂದು ಮೆರೆದವು.

ಈಗ ವೃದ್ದಾಪ್ಯದಲ್ಲಿ ನಮ್ಮ ಸರದಿ
ನಾವು ತುತ್ತು, ಮುತ್ತು , ಜ್ಞಾನ ಕೊಟ್ಟ
ಮಕ್ಕಳು ನಮ್ಮನ್ನು ತೊರೆದರು.

ಈಗ ಮತ್ತೆ ಕೇಳುವಂತೆ ಮಾಡಿದೆ
ಕಣ್ಣಿಗೆ ಕಾಣದ ದೇವರಿಗೆ ಕಣ್ಣೇ ಇಲ್ಲವೇ??

– **ಮಂಜುಶ್ರೀ ಮುರಳೀಧರ್**
ತೋರಣಗಲ್ಲು, ಬಳ್ಳಾರಿ.

## ತುಂಗಭದ್ರಾ ನೀರಿನ ಮಟ್ಟ




| ಶನಿವಾರ : 16-12-2023 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1590.67 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 1903 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 11.602 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1627.58 ಅಡಿ |
| ಒಳ ಹರಿವು | 1179 ಕ್ಯುಸೆಕ್ |
| ಹೊರ ಹರಿವು | 6556 ಕ್ಯುಸೆಕ್ |
| ಸಾಮರ್ಥ್ಯ | 85.254 ಟಿಎಂಸಿ |

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ನಿಸರ್ಗದ ಕಲಾಕೃತಿಗಳು ಹಂಪಿಯ ಹೆಬ್ಬಂಡೆಗಳು

ನೋಡುವ ಆಸಕ್ತಿ,ಕುತೂಹಲ ನಿಮ್ಮಲ್ಲಿದ್ದರೆ ಹಂಪಿಗೆ ಬನ್ನಿ.ಇದೊಂದು ಅದ್ಭುತ ಹಾಗೂ ಪ್ರಾಕೃತಿಕವಾದ ಬಯಲು ವಸ್ತು ಸಂಗ್ರಹಾಲಯ. ಹಂಪಿ ಅಂದಾಕ್ಷಣ ಎಲ್ಲರ ಕಣ್ಣು ಮುಂದೆ ಬರುವುದು ವಿರೂಪಾಕ್ಷ ದೇವಾಲಯ, ಕಲ್ಲಿನ ರಥ,ವಿಜಯ ವಿಠಲ, ಉಗ್ರ ನರಸಿಂಹ, ಕಮಲ್ ಮಹಲ್, ರಾಣಿಸ್ನಾನಗೃಹ ಅಳಿದುಳಿದ ಸ್ಮಾರಕಗಳು, ಮಂಟಪಗಳು. ಆದರೆ ಇವುಗಳನ್ನು ಹೊರತುಪಡಿಸಿಯು ನೋಡಬಹುದಾದ್ದವುಗಳೆಂದರೆ, ನಿಸರ್ಗ ನಿರ್ಮಿತ ಹಂಪಿಯ ಹೆಬ್ಬಂಡೆಗಳು. ನೋಡುವ ಕಣ್ಣು ಅರಿಯುವ ಮನಸ್ಸಿದ್ದರೆ ಸಾವಿರಾರು ಬಂಡೆಗಳು ಒಂದೊಂದು ಕಲಾ ಕೃತಿಗಳಾಗಿ ಕಾಣಿಸುತ್ತವೆ. ಮಣ್ಣು ಗಿಡಮರಗಳ ಗುಡ್ಡಗಳನ್ನು ನೋಡಿದವರಿಗೆ ಇಲ್ಲಿ ಕಲ್ಲುಗಳೆ ಬೆಳೆದು ನಿಂತ ಹೆಬ್ಬಂಡೆಗಳಪರ್ವತದಂತೆಕಾಣಿಸುವುದನ್ನುನೋಡಿಆಶ್ಚರ್ಯಗೊಳ್ಳುತ್ತಾರೆ.ಈ ಬಂಡೆಯ ಪರ್ವತಗಳ ನಡುವೆ ಹರಿಯುವ ಹಂಪಿ ಹೊಳೆ,ಹಚ್ಚು ಹಸಿರಿನ ಪ್ರದೇಶ, ಈ ಹಂಪಿಯ ಪರಿಸರದಲ್ಲಿ ನಿಂತು ಎತ್ತ ದೃಷ್ಟಿ ಹರಿಸಿದರೂ ಬೃಹತ್ ಬಂಡೆಗಳ ವಿರಾಟ ದರ್ಶನ ನಿಮಗಾಗುತ್ತದೆ. ಬೃಹತ್ ಬಂಡೆಗಳ ಸಮೂಹದಿಂದ ಈ ಪ್ರದೇಶ ಶೋಭಿಸುತ್ತಿದೆ. ಚಿತ್ರ ವಿಚಿತ್ರವಾಗಿ ಈ ಹೆಬ್ಬಂಡೆಗಳು ಹರಡಿಕೊಂಡಿವೆ. ಇಲ್ಲಿ ಬರೀ ಬಂಡೆಗಳನ್ನೇ ಪ್ರಕೃತಿ ಸೃಷ್ಟಿಸಿದಂತಿದೆ ಈ ಬೃಹತ್ ಬಂಡೆಗಳ ಮಧ್ಯದಲ್ಲಿ ಆದಿಮಾನವ ನೆಲೆಸಿದ್ದ. ಸಾಧು ಸಂತರು ಸತ್ಪುರುಷರು ಈ ಗುಹೆಗಳಲ್ಲಿ ವಾಸವಾಗಿದ್ದರು. ಈ ಬೆಟ್ಟ ಮತ್ತು ಗುಡ್ಡಗಳು ನಮ್ಮ ನಾಗರಿಕತೆ ಮತ್ತು ಸಂಸ್ಕೃತಿಯನ್ನು ತಮ್ಮ ಒಡಲಲ್ಲಿ ಹುದುಗಿಸಿಕೊಂಡಿವೆ. ಗತಕಾಲದ ಚರಿತ್ರೆಯನ್ನು, ವಿಜಯನಗರ ಸಾಮ್ರಾಜ್ಯದ ವೈಭವವನ್ನು ಕಂಡಿದ್ದ ಈ ಬಂಡೆಗಳು ಈಗ ಮೂಕ ಸಾಕ್ಷಿಗಳಂತೆ,ತಮ್ಮ ಸಹಜ ಗಾಂಭೀರ್ಯತೆಯ ಸೌಂದರ್ಯದಿಂದ ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಈ ಬಾರಿ ಹಂಪಿಯ ಈ ಬಂಡೆಗಳ ಕುರಿತ ಚಿತ್ರಣ ನಿಮಗಾಗಿ.



ಚಿತ್ರ: ಶಿವಶಂಕರ ಬಣಗಾರ

### ಅತ್ಯಂತ ಪ್ರಾಚೀನ ಬಂಡೆಗಳು

ಈ ಬಂಡೆಗಳಿಗೆ ಲಕ್ಷಾಂತರ ವರ್ಷಗಳ ಚರಿತ್ರೆ ಇದೆ. ಹಂಪಿಯು ಡೆಕ್ಕನ್ ರಸ್ತಭೂಮಿಯಾಗಿದೆ. ಇದು ಪ್ರಪಂಚದ ಅತ್ಯಂತ ಹಳೆಯ ಮತ್ತು ಅತ್ಯಂತ ಸ್ಥಿರವಾದ ಭೌಗೋಳಿಕ ರಚನೆಯಲ್ಲಿ ಒಂದಾಗಿದೆ. ಹಂಪಿಯ ಪರಿಸರದ ಇಲ್ಲಿಯ ಬಂಡೆಗಳ ಗುಹೆಗಳಲ್ಲಿ ಆದಿ ಮಾನವ ನೆಲೆಸಿದ್ದ ಎನ್ನುವುದಕ್ಕೆ ವರ್ಣ ಚಿತ್ರಗಳು, ಅವನು ಬಳಸುತ್ತಿದ್ದ ವಸ್ತುಗಳು ದೊರೆಕಿವೆ. ಹೀಗಾಗಿ ಈ ಬೆಟ್ಟ ಗುಡ್ಡ ನದಿ ಚಾರಿತ್ರಿಕ ಮಹತ್ವವನ್ನು ಪಡೆದುಕೊಂಡಿವೆ. ಲಕ್ಷಾಂತರ ವರ್ಷಗಳಿಂದ ಬಿಸಿಲು ಮಳೆ ಗಾಳಿಗೆ ಮೈಯೊಡ್ಡಿ ನಿಂತಿರುವ ಈ ಬಂಡೆಗಳು ತಮ್ಮ ಸಹಜ ಸೌಂದರ್ಯದಿಂದ ಗಮನ ಸೆಳೆಯುತ್ತವೆ.ರಾಮಾಯಣ ಕಾಲಕ್ಕೂ ಪೂರ್ವದಲ್ಲಿ ಈ ಬೆಟ್ಟ ಗುಡ್ಡಗಳು ಹಂಪಿಯ ಧಾರ್ಮಿಕ ಚಾರಿತ್ರಿಕ ಸಾಂಸ್ಕೃತಿಕ ಕಾರ್ಯಗಳಿಗೆ ಮೂಕ ಸಾಕ್ಷಿಯಾಗಿ ನಿಂತಿವೆ. ಈ ಒಂದೊಂದು ಬಂಡೆಗಳು ಒಂದೊಂದು ಕಲಾಕೃತಿಗಳಾಗಿ ನಮ್ಮ ಮುಂದೆ ಇವೆ. ಹಂಪಿ ಸ್ಮಾರಕಗಳನ್ನು ನೋಡಲೆಂದೇ ಬಂದ ಅದೆಷ್ಟೋ ಜನರಿಗೆ ಈ ಬಂಡೆಗಳು ಅದ್ಭುತವಾಗಿ ಕಾಣಿಸುತ್ತವೆ.

ಸ್ಮಾರಕಗಳನ್ನು ತಮ್ಮ ಕ್ಯಾಮೆರಾ ಕುಂಚಗಳಲ್ಲಿ ಬಂದ ಅದೆಷ್ಟೋ ಕಲಾವಿದರು ಮೊದಲು ಈ ಬಂಡೆಗಳನ್ನು ನೋಡಿ ತಮ್ಮ ಕ್ಯಾಮರಾ ಮತ್ತು ಕುಂಚಗಳಲ್ಲಿ ಇವುಗಳನ್ನೇ ಸರಿ ಹಿಡಿಯುತ್ತಾರೆ ಇವುಗಳು ಖ್ಯಾತ ಕಲಾವಿದ ಕಲಾಕೃತಿಗಳಿಗಿಂತ ಮಿಗಿಲಾದತ್ತು ಕಲಾವಿದ ಶಿಲ್ಪಿಗಳ ಕಲಾಚಾತುರ್ಯಕ್ಕೂ ಸವಾಲೆಸೆಯಬಲ್ಲವುಗಳಾಗಿವೆ. ನಮ್ಮ ಕವಿಗಳ ಕಲ್ಪನೆಗೂ ಮೀರಿದ ದೃಶ್ಯಕಾವ್ಯಗಳಿವು.

ಈ ಬಂಡೆಗಳ ಹುಟ್ಟಿಗೆ ಜನಪದ ಕಥೆಯು ಇದೆ ರಾವಣ ಸೀತೆಯನ್ನು ಕದ್ದು ಬಚ್ಚಿಟ್ಟಿದ್ದಾಗ ಸೀತೆಯನ್ನು ಹುಡುಕಲು ಶ್ರೀರಾಮಚಂದ್ರ ತನ್ನ ಕಪಿ





**ಹಂಪಿ ಒಳನೋಟ**

**ಎಂ.ಎಂ.ಶಿವಪ್ರಕಾಶ**
**ಹೊಸಪೇಟೆ**

ಸೇನೆಯೊಂದಿಗೆ ಬಂದಾಗ ಹಂಪಿ ಹೊಳೆಯ ದಾಟಿ ಲಂಕಾ ಪಟ್ಟಣಕ್ಕೆ ಹೋಗಲು ಸೇತುವೆ ಕಟ್ಟಲು ಬಂಡೆಗಳನ್ನು ಹೊತ್ತು ತರುತ್ತಿದ್ದವಂತೆ, ಸೇತುವೆ ಕಟ್ಟಲು ಕಲ್ಲುಗಳು ಸಾಕಾದಾಗ ಶ್ರೀರಾಮ ಕಪಿಗಳಿಗೆ ಬಂಡೆಗಳನ್ನು ತರುವುದು ಸಾಕೆಂದು ಕೂಗಿ ಹೇಳಿದಾಗ ಆ ಕಪಿಗಳು ತಾವು ಹೊತ್ತು ತರುತ್ತಿದ್ದ ಬಂಡೆಗಳನ್ನು ಅಲ್ಲಲ್ಲಿಯೇ ಬಿಸಾಡಿದವಂತೆ.ಆ ಬಂಡೆಗಳೆ ಬೃಹದಾಕಾರದಲ್ಲಿ ಬೆಳೆದ ನಿಂತಿವೆ ಎನ್ನುತ್ತಾರೆ ಜನಪದರು. ಹೀಗೆ ಬೆಳೆದು ನಿಂತ ಬಂಡೆಗಳಿಗೆ ಅಕ್ಕ–ತಂಗಿಯರ ಗುಂಡು, ಗಂಡ ಹೆಂಡಿರಗುಂಡು, ಹೆಂಡಮಾರಗುಂಡು ಹೀಗೇ ಒಂದೊಂದು ಹೆಸರು ಕಥೆ ನಂಬಿಕೆ ಇದೆ. ಕಮಲಾಪುರದಿಂದ ಹಂಪಿಗೆ ಬರುವ ದಾರಿಯಲ್ಲಿ ಗಜಗಾತ್ರದ ಕಲ್ಲುಗಳಲ್ಲಿ ಕಮಾನಿ ನಕಾರದ ಎರಡು ಬಂಡೆಗಳು ಕಾಣುತ್ತವೆ ಇವೆ ಅಕ್ಕ–ತಂಗಿಯರ ಕಲ್ಲುಗಳು( ಈಗ ಇವುಗಳು ಕಳಚಿಕೊಂಡು ಬಿದ್ದಿವೆ ) ಜೀವಂತವಾಗಿದ್ದ ಅಕ್ಕ ಮತ್ತು ತಂಗಿ ಕಲ್ಲಾಗಿ ನಿಂತಿದ್ದಾರೆ ಎನ್ನುವ ಜನಪದ ನಂಬಿಕೆ ಕಥೆಗಳು. ಹೀಗೆ ಕಲ್ಲಾದ ಅಕ್ಕ–ತಂಗಿಯರು ಬೋಜರಾಜನ ಮಕ್ಕಳು ಎನ್ನುವ ನಂಬಿಕೆ ಒಂದು ಕಡೆಯಾದರೆ ಹೆಚ್ಚು ಜನಪ್ರಿಯ ಕಥೆ ಅಂದರೆ ವಿಜಯನಗರದ ಗೌಡನ ಮನೆಗೆ ಅಕ್ಕತಂಗಿಯರನ್ನು ಮದುವೆ ಮಾಡಿ ಕೊಡಲಾಗಿತ್ತಂತೆ ಕಷ್ಟಗಳನ್ನು ಸಹಿಸಿಕೊಳ್ಳುವ ಶಕ್ತಿ ಅಕ್ಕನಿಗೆ ಇತ್ತು ಆದರೆ ತಂಗಿ ಕಷ್ಟಗಳನ್ನು ಸಹಿಸಕೊಳ್ಳಲಾರದವಳು ಹೀಗಾಗಿ ತಂಗಿ ಗಂಡನ ಮನೆಯಿಂದ ತವರು ಮನೆಗೆ ಹೊರಟ ನಿಂತಾಗ ಅಕ್ಕ ತಂಗಿಯನ್ನು ತಬ್ಬಿಕೊಂಡು ತವರು ಮನೆಗೆ ಹೋಗದಂತೆ ಅಡ್ಡಗಟ್ಟಿ ನಿಂತಳಂತೆ. ಆಗ ಈ ಅಕ್ಕ ತಂಗಿಯರು ಹೀಗೆ ಕಲ್ಲಾದರೂ ಎಂಬುದು ಐತಿಹ್ಯ.

ಹಾಗೇನೆ ಗಂಡ ಹೆಂಡತಿ ಕಲ್ಲು ಎಂದು ಮತ್ತೊಂದು ಕಥೆ ಇದೆ. ಒಂದು ಊರಿನಲ್ಲಿ ಗಂಡ ಹೆಂಡತಿಯರಿದ್ದರು.ಅವರಿಗೆ ಬಹಳ ಕಾಲದವರೆಗೆ ಮಕ್ಕಳಾಗಿರಲಿಲ್ಲ ಹೀಗಾಗಿ ಅವರು ಹರಕೆ ಹೊತ್ತು ಹಂಪಿಗೆ ಬಂದು ಪಂಪಾ ವಿರೂಪಾಕ್ಷರ ದರ್ಶನವನ್ನು ಪಡೆದು ಮಾಲ್ಯವಂತದಲ್ಲಿ ಪೂಜೆ ಮಾಡಿ ಹಿಂದಿರುಗುವ ಸಂದರ್ಭದಲ್ಲಿ ಅವರು ಅಲ್ಲಿ ಬಿದ್ದಿದ್ದ ಎರಡು ಕಲ್ಲುಗಳನ್ನು ಎತ್ತಿ ನಿಲ್ಲಿಸಿದರಂತೆ.ಮಹಾ ಶಿವಭಕ್ತರಾಗಿದ್ದ ಇವರು ತಮ್ಮ ದೈವಿಶಕ್ತಿಯಿಂದ ಈ ಬೃಹತ್ ಕಲೆಗಳನ್ನು ಎತ್ತಿ ನಿಲ್ಲಿಸಿದ ನೆನಪಿಗಾಗಿ ಜನಪದರು ಈ ಬಂಡೆಗಳನ್ನು ಗಂಡ ಹೆಂಡತಿ ಗುಂಡು ಎಂದು ಕರೆಯುತ್ತಿದ್ದಾರೆ.

ಹಂಪಿಯಲ್ಲಿರುವ ಹೇಮಕೂಟಕ್ಕೆ ಪೌರಾಣಿಕ, ಧಾರ್ಮಿಕ ಹಾಗೂ ಪೂಜ್ಯನೀಯ ಸ್ಥಾನವಿದೆ. ಪಾರ್ವತಿ ತಪಸ್ಸಿಗೆ ಶಿವನನ್ನು ಒಲಿಸಿಕೊಂಡಿದ್ದು ಈ ಸ್ಥಳದಲ್ಲಿ ಎನ್ನುವ ಅಪಾರ ನಂಬಿಕೆ. ಗಿರಿಜಾ ಕಲ್ಯಾಣ ನಡೆದಿದ್ದು ಇಲ್ಲಿಯೇ.ಹೀಗಾಗಿ ವಿರೂಪಾಕ್ಷ ನನ್ನು ಹೇಮಕೂಟ ಸಿಂಹಾಸನಾಧೀಶ ಎಂದು ಕರೆಯಲಾಗುತ್ತಿದೆ.ಹೀಗೆ ಹೇಮಕೂಟ ಪರ್ವತ ಧಾರ್ವಿಕವಾಗಿ,ಪೌರಾಣಿಕವಾಗಿ ಮಹತ್ವ ಪಡೆದಿದೆ.

### ಪರ್ವತಗಳ ಆಗರ

ಹಂಪಿ ಅಂದಾಕ್ಷಣ ನಮಗೆ ಸ್ಮಾರಕಗಳಿರುವ ಪ್ರದೇಶ ಅಷ್ಟೇ ಎಂದು ಭಾವಿಸುತ್ತೇವೆ. ಆದರೆ ವಿಜಯನಗರದ ಸಾಮ್ರಾಜ್ಯದ ಸಂದರ್ಭದಲ್ಲಿ ಇದರ ವ್ಯಾಪ್ತಿ ಸುಮಾರು 46 ಚ. ಕಿಲೋಮೀಟರ್ ವ್ಯಾಪ್ತಿಯನ್ನು ಹೊಂದಿತ್ತು. ಇದನ್ನು ಗಮನಿಸಿದಾಗ ಈ ಪ್ರದೇಶ ಬೆಟ್ಟಗುಡ್ಡಗಳ ಪ್ರದೇಶವಾಗಿದೆ. ಈ ಪ್ರದೇಶದಲ್ಲಿ ಹೇಮಕೂಟ ಪರ್ವತ,ಮಾತಂಗ ಪರ್ವತ, ಮೌಲ್ಯವಂತ, ಋಷ್ಯ ಮುಖ ಪರ್ವತ, ಕಿಷ್ಕಿಂದೆ, ಅಂಜನಾದ್ರಿ, ಧರ್ಮದಗುಡ್ಡ, ಎಡಿಗುಡ್ಡ ಹೀಗೆ ಹತ್ತಾರು ಬೆಟ್ಟಗಳನ್ನು ಹೊಂದಿರುವ ಪರ್ವತಗಳನ್ನು ನಾವು ಕಾಣಬಹುದು. ಈ ಎಲ್ಲ ಪರ್ವತಗಳಿಗೂ ಧಾರ್ಮಿಕ,ಪೌರಾಣಿಕ ಚರಿತ್ರೆ ಇದೆ. ಹಂಪಿಯಲ್ಲಿ ಹರಿಯುವ ತುಂಗಭದ್ರೆಯ ಬಲಭಾಗಕ್ಕೆ ಎತ್ತರದ ಕಲ್ಲು ಬೆಟ್ಟಮಾತಂಗ ಪರ್ವತವಿದ್ದರೆ, ಎಡ ಭಾಗದಲ್ಲಿ ಬಂಡೆಗಳಿಂದ ಕೂಡಿದ ಅತ್ಯಂತ ಎತ್ತರದ ಅಂಜನಾದ್ರಿ ಬೆಟ್ಟವಿದೆ ಎರಡು ಪರ್ವತಗಳ ಮಧ್ಯೆ ತುಂಗಭದ್ರೆ ಹರಿಯುತ್ತಿದ್ದಾಳೆ

ಹಂಪೆಯಿಂದ ಆನೆಗುಂದಿ ವರೆಗಿನ ಬೃಹತ್ ಬಂಡೆಗಳ ಪ್ರದೇಶದಲ್ಲಿ ನೀವು ವಿಹರಿಸಿದರೆ ನಿಮಗೆ ರೋಮಾಂಚನವಾದ ಅನುಭವ ಉಂಟಾಗುತ್ತದೆ. ಏಕೆಂದರೆ ಮಲೆನಾಡ ಪ್ರದೇಶದಲ್ಲಿ ಅಥವಾ ಪಶ್ಚಿಮ ಘಟ್ಟಗಳ ಪ್ರದೇಶದಲ್ಲಿ ಓಡಾಡಿದರೆ ಅಲ್ಲಿನಿಮ್ಮ ಕಣ್ಣಿಗೆ ಹಸಿರು ಮಾತ್ರ ಕಾಣಸಿಗುತ್ತದೆ.ಆದರೆ ಇಲ್ಲಿ ಬೃಹತ್ ಬಂಡೆಗಳು,ಹಸಿರು ,ಜುಳು ಜುಳು ಹರಿಯುವ ಹೊಳೆ, ಇಂಥಹ ಪ್ರದೇಶ ನಿಮಗೆ ಬೇರೊಂದು ಕಡೆ ಕಾಣೆ ಸಿಗಲಾರದು. ಬಿಸಿಲ ನಾಡಿನಲ್ಲಿ ಇಂಥದೊಂದು ಪರಿಹಾರವಿದೆ ಎಂದು ಆಶ್ಚರ್ಯ ಪಡುತ್ತೀರಿ.ಹಂಪಿಯ ಸ್ಮಾರಕಗಳಿಗೆ ಇದ್ದಷ್ಟು ಮಹತ್ವ ಈ ಬಂಡೆಗಳಿಗೆ ಇದೆ.



**PLACE YOUR ADVERTISEMENT HERE CONTCAT FOR MORE DETAILS: 9448633038**

**IN THE COURT OF THE CIVIL JUDGE AND J.M.F.C.AT KUDLIGI**
**Crl. Misc. No.267/2023**

Between: 1) Durgamma D/O Late Shidlappa aged about 62 years, 2) Siddappa son of late Sidlappa aged about 60 years, 3) Harijan Rajaiah @ Rajappa aged about 48 years, 4) Smt.Obamma wife of late Nagappa aged about 63 years, 5) Smt.Renuka.H wife of late Nagappa aged about 46, 6) H.uday Kumar son of late Channappa aged about 36 years, All are Hindu agriculturist resident of Chandrashekharapuru Village in Kudligi Taluk, Vijayanagara District. ....Petitioner
And
The Tahasildar Kudligi ....Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioner has instituted above petition to get the death certificate of his deceased Petitioner No.1 to 3's Father petitioner No's 4 and 5's Father –in law petitioner No 6's grandfather by Name Sidlappa Son of late Sidlappa was died on 15/08/2004 at Chandrashekharapura village in Kudligi Taluk, Vijayanagara District. On the file of the civil Judge & JMFC at Kudligi. The Tahasildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 28/12/2023 at 11 A.M. and interested persons are directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 15/12/2023.

By Order of the court
Chief Ministerial officer
Civil Judge and J.M.F.C Kudligi

H.Ravi, T.Hanumanthappa
Advocate, Kudligi

**IN THE COURT OF THE CIVIL JUDGE AND J.M.F.C.AT KUDLIGI**
**Crl. Misc. No.919/2023**

Between:
1) B.Hullubasappa S/O Late B.Nagappa, aged about 61 years, 2) B.Mooganna S/O Late B.Nagappa, aged about 49 years, 3) B.Gurusiddappa S/O Late B.Nagappa, aged about 47 years, All are Hindu agriculturist resident of Kakkuppi Village in Kudligi Taluk, Vijayanagara District. ....Petitioner
And
The Tahasildar Kudligi .....Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioner has instituted above petition to get the death certificate of his deceased Petitioner Mother by Name Smt.Shanthaveeramma Wife of late Nagappa was died on 13/09/1985 at Kakkuppi village in Kudligi Taluk, Vijayanagara District. On the file of the civil Judge & JMFC at Kudligi. The Tahasildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 30/12/2023 at 11 A.M. and interested persons are directed to produce all the documents upon which you intended to rely in support of your defense.

Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 07/12/2023.

By Order of the court
Chief Ministerial officer
Civil Judge and J.M.F.C Kudligi

H.Gururaj Rao
Advocate, Kudligi

**IN THE COURT OF THE CIVIL JUDGE AND J.M.F.C.AT KUDLIGI. Crl. Misc. No.895/2023**

Between:
1) Smt.Yalavappara Boramma wife of late Yalavappara Basappa ,aged about 45 years, Hindu agriculturist resident of Chowdapura Village in Kudligi Taluk, Vijayanagara District. .....Petitioner
And
The Tahasildar Kudligi ....Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioner has instituted above petition to get the death certificate of his deceased Petitioner Husband by Name Yalavappara Basappa Son of late Rajappa was died on 01/06/2017 at Chowdapura Village in Kudligi Taluk, Vijayanagara District On the file of the civil Judge & JMFC at Kudligi. The Tahasildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 26/12/2023 at 11 A.M. and interested persons are directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 11/12/2023.

By Order of the court
Chief Ministerial officer
Civil Judge and J.M.F.C Kudligi

H.Venaktesh
Durugappa.H
Advocate, Kudligi

**IN THE COURT OF THE CIVIL JUDGE AND J.M.F.C.AT KUDLIGI**
**Crl. Misc. No.605/2023**

Between:
1) Smt. Sharadamma wife of parameshwarappa, aged about 45 years, Hindu agriculturist resident of Chandrashekharapuru Village in Kudligi Taluk, Vijayanagara District. ....Petitioner
And
The Tahasildar Kudligi .....Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioner has instituted above petition to get the death certificate of his deceased Petitioner son by Name P.Thippesha Son of late Parameshwarappa was died on 19/03/2021 at Chandrashekharapuru Village in Kudligi Taluk, Vijayanagara District On the file of the civil Judge & JMFC at Kudligi. The Tahasildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 29/12/2023 at 11 A.M. and interested persons are directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 12/12/2023.

By Order of the court
Chief Ministerial officer
Civil Judge and J.M.F.C Kudligi

Sri.Govindareddy
Advocate, Kudligi

**IN THE COURT OF THE CIVIL JUDGE AND J.M.F.C.AT KUDLIGI. Crl. Misc. No.900/2023**

Between:
1) Kenchalingappa son of Late Basappa, aged about 39 years, Hindu agriculturist resident of Thayakanhalli Village in Kudligi Taluk, Vijayanagara District. ....Petitioner
And
The Tahasildar Kudligi .....Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioner has instituted above petition to get the death certificate of his deceased Petitioner Wife by Name N.C.Bhagyamma wife of late K.Kenchalingappa was died on 17/08/2016 at Thayakanhalli Village in Kudligi Taluk, Vijayanagara District.On the file of the civil Judge & JMFC at Kudligi. The Tahasildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 26/12/2023 at 11 A.M. and interested persons are directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined ex parte.
Given under my hand and seal of this Hon'ble Court on 01/11/2023

By Order of the court
Chief Ministerial officer
Civil Judge and J.M.F.C Kudligi

K.M.Kataiah
Advocate, Kudligi

**IN THE COURT OF THE CIVIL JUDGE AND J.M.F.C.AT KUDLIGI Crl. Misc. No.201/2022**

Between:
1) Parusappa Son of late Chowdappa aged about 51 years, 2) Ramappa son of late howdappa aged about 49 years, 3) G.ajappa son of late Chowdappa aged about 38 years, 4) G.Mahesha son of late Chowdappa aged about 34 years, 5) G.Parusappa son of late Chowdappa aged about 26 years, All are Hindu agriculturist resident of athanahalli Village in Kudligi Taluk, Vijayanagara District. ......Petitioner
And
The Tahasildar Kudligi ......Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioner has instituted above petition to get the death certificate of his deceased Petitioner Father by Name Chowdappa Son of Erappa was died on 15/05/2010 at Bathanahalli Village in Kudligi Taluk, Vijayanagara District.On the file of the civil Judge & JMFC at Kudligi. The Tahasildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 09/01/2024 at 11 A.M. and interested persons are directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 12/12/2023

By Order of the court
Chief Ministerial officer
Civil Judge and J.M.F.C Kudligi

H.Venkatesh
Advocate, Kudligi

# ಹೃದಯಾಘಾತ ತಡೆಗೆ ಜಾಗೃತರಾಗಿ

## ಹೃದಯ ಚಿಕಿತ್ಸಾ ಕೇಂದ್ರದ ಡಾ. ಗುರುರಾಜ್ ಹೇಳಿಕೆ । ಶಿಬಿರದಲ್ಲಿ 250ಕ್ಕೂ ಹೆಚ್ಚು ಜನರಿಗೆ ಉಚಿತ ಹೃದಯ ತಪಾಸಣೆ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಮನುಷ್ಯನ ಹೃದಯಕ್ಕೆ ಅಘಾತವಾದರೆ ಜೀವ ಹಾನಿಯಾಗುತ್ತದೆ. ಹೃದಯಾಘಾತಕ್ಕೂ ಮುನ್ನ ಜಾಗೃತರಾಗಿ ಎಂದು ದಾವಣಗೆರೆಯ ಎಸ್.ಎಸ್.ನಾರಾಯಣ ಹೃದಯ ಚಿಕಿತ್ಸಾ ಕೇಂದ್ರದ ಡಾ. ಗುರುರಾಜ್ ತಿಳಿಸಿದರು.

ತಾಲೂಕಿನ ಹಂಪಾಪಟ್ಟಣದ ನೆರಳು ಪಾಕ್ಷಿಕ ಪತ್ರಿಕೆಯ 27ನೇ ವಾರ್ಷಿಕೋತ್ಸವದ ಅಂಗವಾಗಿ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಘಟಕದ ಸಹಯೋಗದೊಂದಿಗೆ ಸರ್ಕಾರಿ ಪ್ರಾಥಮಿಕ ಶಾಲಾ ಆವರಣದಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ಉಚಿತ ಹೃದಯ ತಪಾಸಣಾ ಶಿಬಿರದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಯಾವುದೇ ರೋಗಗಳು ತಗಲುವ ಮುನ್ನ ಪ್ರಥಮ ಹಂತದಲ್ಲಿಯೇ ನಿಯಂತ್ರಿಸಬೇಕು. ಎದೆ ನೋವು, ಗ್ಯಾಸ್ಟ್ರಿಕ್‌ಗಳನ್ನು ನಿರ್ಲಕ್ಷ್ಯಮಾಡದೆ ಸೂಕ್ತ ವೈದ್ಯರಿಂದ ತಪಾಸಣೆ ಮಾಡಿಸಿದರೆ ಪರಿಹಾರ ಸಿಗುತ್ತೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಪಟ್ಟಣದ ಡಾ. ಕರಿಬಸಯ್ಯ ಮಾತನಾಡಿ, ನಿತ್ಯ ಜಂಗ್‌ಫುಡ್ ಹಾಗೂ ಮಾಂಸಹಾರ ಸೇವಿಸುವುದರಿಂದ ಹೃದಯಾಘಾತ ಸಂಭವಿಸುತ್ತೆ. ಇದನ್ನು ತಡೆಯುವುದು ಸರಿಯಾದ ಸಮಯಕ್ಕೆ ಊಟ, ಉಪಹಾರ ಹಾಗೂ ನಿದ್ರೆ ನಿತ್ಯ



ಜೀವನದಲ್ಲಿ ರೂಢಿಡಿಕೊಂಡರೆ ಉತ್ತಮವಾಗಿ ಆರೋಗ್ಯವನ್ನು ಕಾಪಾಡಿಕೊಳ್ಳ ಬಹುದು ಎಂದುರು.

ಕಾನಿಪ ಸಂಘದ ಜಿಲ್ಲಾ ಉಪಾಧ್ಯಕ್ಷ ಹಾಗೂ ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಬುಡ್ಡಿ ಬಸವರಾಜ್ ಪ್ರಾಸ್ತಾವಿಕವಾಗಿ ಮಾತನಾಡಿ, ಯಾವುದೇ ಹಾನಿಕಾರಕ ರೋಗಗಳಿಂದ ಮನುಷ್ಯ ಕೂಡಲೆ ಪ್ರಾಣ ಕಳೆದುಕೊಳ್ಳುವುದಿಲ್ಲ. ಆದರೆ ಹೃದಯಾಘಾತವಾದ ಕೆಲ ಕ್ಷಣಗಳಲ್ಲಿಯೇ ಪ್ರಾಣ ಹಾನಿಯಾಗಬಹುದು. ಆದ್ದರಿಂದ ನಮ್ಮನ್ನು ಅವಲಂಬಿಸಿದ ಕುಟುಂಬದ ಹಿತಕ್ಕಾಗಿ ನಾವು ಹೋರಾಟಮಾಡಬೇಕಾಗಿ ಆದ್ದರಿಂದ ಹೃದಯಾಘಾತ ತಡೆಯುವಂತ ಕೆಲಸವಾಗಬೇಕಾಗಿದೆ. ಇಂತಹಉಚಿತಶಿಬಿರಗಳನ್ನುಸದುಪಯೋಗಪಡಿಸಿಕೊಳ್ಳಿ ಎಂದರು.

ಈ ಶಿಬಿರದಲ್ಲಿ 250ಕ್ಕೂ ಹೆಚ್ಚು ಜನರು ಹೃದಯ ತಪಾಸಣೆಯಲ್ಲಿ ಪಾಲ್ಗೊಂಡರು.

ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಉಪಾಮತಿ ಶೆಟ್ಟರ್ ಅಧ್ಯಕ್ಷತೆ ವಹಿಸಿದ್ದರು. ಕ್ಷೇತ್ರ ಶಿಕ್ಷಣಾಧಿಕಾರಿ ಮೈಲೇಶ್ ಬೇವೂರ್, ಡಾ.ಪ್ರಸನ್ನ ಕುಮಾರ್, ಗ್ರಾ.ಪಂ.ಅಧ್ಯಕ್ಷ ಬಲ್ಲಾಹುಣಸಿ ನಾಗರಾಜ್, ಸದಸ್ಯರಾದ ಸಿ.ಎಲ್.ಕುಮಾರ್, ವಿ.ಹನುಮಂತಪ್ಪ, ಜಿ.ಪಂ.ಮಜಿ ಸದಸ್ಯ ಎಚ್.ಭೀಮಜ್ಜ, ವಿಎಸ್‌ಎಸ್‌ಎನ್ ಅಧ್ಯಕ್ಷ ಲಿಂಗರಾಜ್‌ಯಾದವ್, ಮುಖಂಡರಾದ ಗೆದ್ದಲಕಟ್ಟಿ ತಿಮ್ಮಪ್ಪ, ಖಜಾಸಾಬ್, ಪೂಜಾರ್ ಸೋಮನಾಥ, ಎ.ಕೇಶವಮೂರ್ತಿ, ಸಂಗಮೇಶ ಭಜಂತ್ರಿ ಸೋಮನಾಥ ಹಾಗೂ ಶಾಲಾ ಪ್ರಭಾರಿ ಮುಖ್ಯ ಶಿಕ್ಷಕ ಕೆ.ಉಮೇಶ, ದಾವಣಗೆರೆ ಹೃದಯಾಲಯ ಸಿಬ್ಬಂದಿ ಮತ್ತು ಕಾರ್ಯನಿರತ ಪತ್ರಕರ್ತರ ಸಂಘದ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಎನ್.ನಾಗರಾಜ್ ನಿರ್ವಹಿಸಿದರು. ಹಗರಿಬೊಮ್ಮನಹಳ್ಳಿ ತಾಲೂಕಿನ ಹಂಪಾಟ್ಟಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಉಚಿತ ಹೃದಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಲಾಯಿತು. ಉಚಿತ ಹೃದಯ ತಪಾಸಣಾ ಶಿಬಿರದಲ್ಲಿ, ಪತ್ರಕರ್ತರ ಸಂಘದ ತಾಲೂಕು ಘಟಕದಿಂದ ವೈದ್ಯರನ್ನು ಸನ್ಮಾನಿಸಲಾಯಿತು.

> **ಹೃದಯಾಘಾತ ಸಾಮಾನ್ಯವಾಗಿ ಇದ್ದಕ್ಕಿದಂತೆ ಬರುವುದಿಲ್ಲ. ಮದ್ಯಪಾನ, ಧೂಮಪಾನದಂತ ದುರಭ್ಯಾಸಗಳಿಂದ ಹೃದಯಾಘಾತವಾಗುವ ಸಂಭವ ಇರುತ್ತೆ. ಸರಿಯಾದ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಪಡೆದುಕೊಳ್ಳಿ. ತಾಲೂಕಿನ ಎಲ್ಲಾ ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳಲ್ಲಿ ಇಸಿಜಿ ತಪಾಸಣೆ ಮಾಡಲಾಗುತ್ತಿದೆ ಮತ್ತು ಉತ್ತಮ ಜನ ಸೇವೆಗಾಗಿ ಈ ಹಂಪಾಪಟ್ಟಣ ಆರೋಗ್ಯ ವಿಸ್ತರಣಾ ಕೇಂದ್ರವನ್ನು 2024ರ ಜನವರಿಯಿಂದ ಪ್ರಾರಂಭಿಲಾಗುವುದು.**
>
> **–ಡಾ.ಶಿವರಾಜ್**
>
> ತಾಲೂಕು ವೈದ್ಯಾಧಿಕಾರಿ. ಹ.ಬೊ.ಹಳ್ಳಿ.

# ತಾಯಿಯ ಸುರಕ್ಷಿತ ಹೆರಿಗೆಗೆ ಕಾಳಜಿ ವಹಿಸಿ

**ಹಂಪಿ ಟೈಮ್ಸ್ ಬಳ್ಳಾರಿ**

ಬಾಣಂತಿಯರ ರಕ್ತದಲ್ಲಿ ಕಬ್ಬಿಣಾಂಶ ಪ್ರಮಾಣ ಮತ್ತು ಅಲ್ಬುಮೀನ್ ಪರೀಕ್ಷೆಯನ್ನು ಪ್ರತಿ ತಿಂಗಳು ಮಾಡಿಸುವ ಮೂಲಕ ರಕ್ತಹೀನತೆ ಮತ್ತು ರಕ್ತದೊತ್ತಡ ಸಮಸ್ಯೆ ಸಕಾಲದಲ್ಲಿ ಗುರ್ತಿಸಿ ಚಿಕಿತ್ಸೆ ನೀಡಬಹುದಾಗಿದ್ದು, ತಾಯಿಯ ಸುರಕ್ಷಿತ ಹೆರಿಗೆಗೆ ಹೆಚ್ಚಿನ ಕಾಳಜಿ ವಹಿಸಬೇಕು ಎಂದು ಬೆಂಗಳೂರು ನಿರ್ದೇಶನಾಲಯ ತಾಯಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಉಪನಿರ್ದೇಶಕ ಡಾ.ರಾಜಕುಮಾರ್ ಅವರು ಸೂಚಿಸಿದರು.

ಶನಿವಾರ ನಡೆದ ಸಿರುಗುಪ್ಪ ತಾಲ್ಲೂಕಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಮದುವೆ ನಂತರದಲ್ಲಿ ಗಂಡನ ಮನೆಯವರು ತಮ್ಮ ಮನೆಗೆ ಒಂದು ಮಗು ಬರಲಿ ಎಂಬುದು ಸಹಜ, ಆದರೆ



ಅಷ್ಟೇ ಮುಖ್ಯವಾದುದು ಗರ್ಭಿಣಿಯ ತಪಾಸಣೆಯಾಗಿದೆ. ಗರ್ಭಿಣಿ ಹೆಣ್ಣು ಮಗಳನ್ನು ಕನಿಷ್ಠ ನಾಲ್ಕು ಬಾರಿ ತಪಾಸಣೆ ಮಾಡಿಸಬೇಕು ಎಂದು ಆಶಾಕಾರ್ತೆಯರಿಗೆ ಸಲಹೆ ಮಾಡಿದರು.

ಆರೋಗ್ಯ ಇಲಾಖೆಯಿಂದ ಒದಗಿಸುವ ಕಬ್ಬಿಣಾಂಶ ಮಾತ್ರೆಗಳನ್ನು ಪ್ರತಿದಿನ ಒಂದರಂತೆ ಕನಿಷ್ಠ 180 ಮಾತ್ರೆಗಳನ್ನು ಸೇವಿಸಲು ಸೂಚಿಸಬೇಕು. ಇದರಿಂದ ಹೆರಿಗೆ ಸಮಯದಲ್ಲಿ ಉಂಟಾಗುವ ರಕ್ತಹೀನತೆಯ ತೊಂದರೆ ತಪ್ಪಿಸಬಹುದು ಎಂದು ಹೇಳಿದರು.

ಹೆರಿಗೆಯನ್ನು ಆಸ್ಪತ್ರೆಯಲ್ಲಿ ಮಾಡಿಸುವ ಮೂಲಕ ತಾಯಿ ಮಗುವಿನ ಸುರಕ್ಷತೆಯು ಸಾಧ್ಯವಾಗುತ್ತದೆ. ಈ ದಿಶೆಯಲ್ಲಿ ಪಾಲಕರೊಂದಿಗೆ ಕ್ಷೇತ್ರ ಸಿಬ್ಬಂದಿಗಳು ನಿಗಾವಹಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ವೈ.ರಮೇಶಬಾಬು ಅವರು ಮಾತನಾಡಿ, ಮಗುವಿನ ಆರೋಗ್ಯ ದೃಷ್ಟಿಯಿಂದ ಮಾಡುವ ಸ್ಕ್ಯಾನಿಂಗ್ ವೇಳೆ ಭ್ರೂಣಲಿಂಗ ಪತ್ತೆ (ಗಂಡು ಅಥವಾ ಹೆಣ್ಣು) ಮಾಹಿತಿ ಕುರಿತು ಹಂಚಿಕೊಳ್ಳಬಾರದು. ಭ್ರೂಣಹತ್ಯೆಗೆ ಕಾರಣವಾದರೆ ಅಂತವರಿಗೆ ಜೈಲು ಶಿಕ್ಷೆ ಮತ್ತು ದಂಡವಿದೆ ಎಂದು ತಿಳಿಸಿದರು.

18 ವರ್ಷ ತುಂಬಿದ ನಂತರವೇ ಹೆಣ್ಣು ಮಗಳಿಗೆ ಮದುವೆ ಮಾಡಿಸುವ ಕುರಿತು ಜಾಗೃತಿ ನೀಡಬೇಕು. ಮದುವೆ ನಂತರ ಗರ್ಭಿಣಿಯಂದು ಗೊತ್ತಾದ ಕೂಡಲೇ ಆರೋಗ್ಯ ಇಲಾಖೆಯಲ್ಲಿ ನೋಂದಣಿ ಮಾಡಿಸಿ ತಾಯಿ ಕಾರ್ಡ್ ಪಡೆದುಕೊಂಡು, ಕನಿಷ್ಠ ಎರಡು ಟಿಡಿ ಚುಚ್ಚುಮದ್ದು ಲಸಿಕೆ ಪಡೆಯಲು ಸೂಚಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಅನೀಲ ಕುಮಾರ್, ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅಧಿಕಾರಿ ಡಾ.ಪೂರ್ಣಿಮಾ ಕಟ್ಟಿಮನಿ, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ವೀರೇಂದ್ರಕುಮಾರ, ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಈರಣ್ಣ, ಹಿರಿಯ ವೈದ್ಯಾಧಿಕಾರಿ ಡಾ.ಬಸವರಾಜ್ ದಮ್ಮೂರು, ಆಡಳಿತ ವೈದ್ಯಾಧಿಕಾರಿ ಡಾ.ಗುರುನಾಥ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್.ದಾಸಪ್ಪನವರ, ವೈದ್ಯಾಧಿಕಾರಿಗಳಾದ ಡಾ.ತಿಪ್ಪೆಸ್ವಾಮಿ ರೆಡ್ಡಿ, ಡಾ.ಸಾಗರ್, ಡಿಎನ್‌ಓ ಗಿರೀಶ್, ಡಿಪಿಎಮ್ ವೆಂಕೋಬ, ಹಿ.ನಿ.ಅಧಿಕಾರಿ ಲಿಂಗರಾಜ್, ಭೀಮರಾಜ್, ಬಿಪಿಎಮ್ ಪ್ರಲ್ಹಾದ್, ಬಿಹೆಚ್‌ಇಓ ಖಾಸೀಂ, ಹೆಚ್‌ಐಓ, ಪಿಹೆಚ್‌ಸಿಓ, ಸಿಹೆಚ್‌ಓ, ಸೇರಿದಂತೆ ಆಶಾ ಕಾರ್ಯಕರ್ತೆಯರು, ಇತರರು ಉಪಸ್ಥಿತರಿದ್ದರು.




## ವಚನ ಅರಿವು

### ಮೊದಲು ಕಾಯಕ

**ತಾ ಮಾಡುವ ಕೃಷಿಯ ಮಾಡುವನ್ನಬರ ಮಾಡಿ,**
**ಕೃಷಿ ತೀರಿದ ಮತ್ತೆ ಗುರುದರ್ಶನ ಲಿಂಗಪೂಜೆ**
**ಜಂಗಮಸೇವೆ**
**ಶಿವಭಕ್ತರ ಸುಖಸಂಭಾಷಣೆ ಶರಣರ ಸಂಗ**
**ಈ ನೇಮವನರಿವುತ್ತಿಪ್ಪುದು ಸದ್ಭಕ್ತನ ಸದಾತ್ಮನ ಯುಕ್ತಿ.**
**ಆಚಾರವೆ ಪ್ರಾಣವಾಗಿಪ್ಪ ರಾಮೇಶ್ವರಲಿಂಗಕ್ಕೆ ಆತನೆ**
**ಚೇತನಭಾವ.**

**– ಅಕ್ಕಮ್ಮ**

ವಚನಕಾರರು ಕಾಯಕಕ್ಕೆ ಹೆಚ್ಚಿನ ಮಹತ್ವ ನೀಡಿದ್ದಾರೆ. ಅಕ್ಕಮ್ಮ ಈ ವಚನದಲ್ಲಿ ಅದರ ಮಹತ್ವದ ಜೊತೆಗೆ ಜೀವನ ವಿಧಾನಕ್ಕೆ ಅನುಸರಿಸುವ ಮಾರ್ಗವನ್ನು ಹೇಳುತ್ತಾಳೆ. ತಾನು ಮಾಡಬೇಕಿರುವ ವೃತ್ತಿಯನ್ನು ಮಾಡಿ ಮುಗಿಸಿ ನಂತರ ಗುರುದರ್ಶನ ಎಂದರೆ ಉಪದೇಶ ಪಡೆಯಲು, ತನ್ನ ಲಿಂಗಪೂಜೆಯನ್ನು ಮಾಡಲು, ಜಂಗಮದ ಸೇವೆಯನ್ನು ಕೈಗೊಳ್ಳಲು ತೊಡಗಬೇಕು. ಶಿವಭಕ್ತರೆಲ್ಲರು ಸೇರಿ ಭಕ್ತಿಯ, ಒಳ್ಳೆಯ ವಿಚಾರಗಳನ್ನು ಮಾತಾಡುತ್ತ ಆತ್ಮ, ಆಧ್ಯಾತ್ಮ ಸಾಧನೆಯ, ಅರಿವಿನ ಮಾರ್ಗದ ಕುರಿತು ಚರ್ಚಿಸುವ ಗೋಷ್ಠಿಯಲ್ಲಿ ಪಾಲ್ಗೊಳ್ಳಬೇಕು. ಇಂತಹ ಆಚರಣೆಯಲ್ಲಿರುವ ಸದ್ಭಕ್ತನ ಬುದ್ಧಿ, ಜ್ಞಾನ, ಅರಿವು ತೀಕ್ಷ್ಣಗೊಂಡು ಚೇತನ ಶಕ್ತಿಯಾಗುತ್ತದೆ. ಅರಿವು ದೊರೆಯುತ್ತದೆ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಮೈಕ್ರೋ ನ್ಯೂಸ್

### ಹ್ಯಾಳ್ಯಾ ಗ್ರಾಮದಲ್ಲಿ 23 ಪಿಂಚಣಿ ಅರ್ಜಿ ಸ್ವೀಕರ.

**ಹಂಪಿ ಟೈಮ್ಸ್ ಕೊಟ್ಟೂರು**

ಅರತ್ತು ವರ್ಷ ಮೇಲ್ಪಟ್ಟ ಮಹಿಳೆ ಮತ್ತು ಪುರುಷರು ಹಾಗೂ ವಿಕಲಚೇತನರು ಪಿಂಚಣಿಯಿಂದ ವಂಚಿತರಾಗಬೇಡಿ,ಪ್ರತಿಯೊಬ್ಬರೂ ಪಿಂಚಣಿ ಅದಾಲತ್ ಸೌಲಭ್ಯ ಪಡೆದುಕೊಳ್ಳಬೇಕು ಎಂದು ತಹಶೀಲ್ದಾರ ಅಮರೇಶ್ ಜಿ.ಕೆ ಗ್ರಾಮಸ್ಥರಲ್ಲಿ ಜಾಗೃತಿ ಮೂಡಿಸಿದರು.

ತಾಲೂಕಿನ ಹ್ಯಾಳ್ಯಾ ಕಂದಾಯಗ್ರಾಮದಲ್ಲಿ ಶನಿವಾರ ಕಂದಾಯ ಇಲಾಖೆ ಮತ್ತು ತಾಲೂಕು ಆಡಳಿತ ವತಿಯಿಂದ ಹಮ್ಮಿಕೊಂಡಿದ್ದ ಕಂದಾಯ ಅದಾಲತ್ ಮತ್ತು ಪಿಂಚಣಿ ಅದಾಲತ್ ಕಾರ್ಯಕ್ರಮದಲ್ಲಿನೊಂದಾಯಿತಫಲಾನುಭವಿಗಳಿಗೆ ಪಿಂಚಣಿ ಪತ್ರ ವಿತರಿಸಿ ಮಾತನಾಡಿದರು.

ಸರ್ಕಾರದ ಸೌಲಭ್ಯಗಳಿಂದ ಯಾರು ವಂಚಿತರಾಗಬಾರದು ಎಂಬ ಉದ್ದೇಶದಿಂದ ಪ್ರತಿ ತಿಂಗಳು ತಾಲೂಕು ಆಡಳಿತದ ವತಿಯಿಂದ ಪಿಂಚಣಿ ಮತ್ತು ಕಂದಾಯ ಅದಾಲತ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ.

ರೈತರು ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳಲು ಪಹಣಿಯನ್ನು ನಿಮ್ಮ ಹೆಸರಿಗೆ ನೋಂದಾಯಿಸಿ ಕೃಷಿ, ಕಂದಾಯ, ಇನ್ನು ಮುಂತಾದ ಇಲಾಖೆಗಳಿಂದ ಸೌಲಭ್ಯಗಳನ್ನು ಪಡೆದುಕೊಳ್ಳಲು ಅನುಕೂಲವಾಗುತ್ತದೆ ಎಂದರು.

ಮರಣ ಹೊಂದಿದವರ ಹೆಸರಿನಲ್ಲಿ ಇರುವಂತಹ ಜಮೀನಿನ ಪಹಣಿಯ ಹೆಸರನ್ನು ಬದಲಾವಣೆ ಮಾಡಿಕೊಳ್ಳಿ, ಸರ್ಕಾರದ ಮಾನದಂಡಗಳ ಆದರದ ಮೇಲೆ ಸರ್ಕಾರದ ಸೌಲಭ್ಯಗಳನ್ನು ಪಡೆಯಬಹುದು ಎಂದರು.

ಪಿಂಚಣಿಯಿಂದ ವಂಚಿತರಾದ ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ 16,ಸಂಧ್ಯಾ ಸುರಕ್ಷಾ ವೇತನ 2,ವಿಧವಾ ವೇತನ 2 ಮನಸ್ವಿನಿ 1,ರಾಷ್ಟ್ರೀಯ ಕುಟುಂಬ ನೆರವು ಯೋಜನೆ 2 ಅರ್ಜಿಗಳನ್ನು ಸ್ವೀಕರಿಸಿದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಸದಸ್ಯರು ಕೊಟ್ರೇಶ್, ಶಿಲ್ಪ ರಾಜು, ಪುಷ್ಪಾವತಿ ಕೊಟ್ರೇಶ್, ಆರ್ ಐ ಹಾಲಸ್ವಾಮಿ, ಗ್ರಾಮ ಲೆಕ್ಕಾಧಿಕಾರಿ ಬಸಮ್ಮ, ಲೋಕೇಶ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ನಿಮ್ಮ ಹೊಸ ಹೊಸ ಉತ್ಪನ್ನಗಳು, ವಿಶೇಷ ಕೊಡುಗೆಗಳು ಮತ್ತು ಕಾಲೇಜು ಪ್ರವೇಶ ಕುರಿತು ನಿಮ್ಮ ಗ್ರಾಹಕರಿಗೆ ಮಾಹಿತಿ ನೀಡಲು ಬಯಸಿದ್ದೀರಾ? ಇಂದೇ ಸಂಪರ್ಕಿಸಿ: ಹಂಪಿ ಟೈಮ್ಸ್ : ಮೊ: 9448633038




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA